


ಟೋನಿ ಅಲಾಮೊ ಕ್ರೈಸ್ತ ಮಿನಿಸ್ಟ್ರಿಗಳು
ವಿಶ್ವ ಸುದ್ದಿಪತ್ರಿಕೆ
ಹೊಸ ಜೆರೂಸಲೇಮ್
ವಿಶ್ವಾದ್ಯಂತದ ಚರ್ಚುಗಳು
ಧರ್ಮಗುರು ಟೋನಿ ಅಲಾಮೊ
ಅಲಾಮೊ ಕ್ರೈಸ್ತ ರಾಷ್ಟ್ರ
ಸಂಪುಟ 20500

# ಒಂದೇ ಉಪಾಯ

ಟೋನಿ ಅಲಾಮೊ ಅವರಿಂದ



*1970 ರಲ್ಲಿ ಹೊಸತಾಗಿ ಮತಾಂತರಗೊಂಡು ದೀಕ್ಷಾಸ್ನಾನ ಪಡೆಯಲಿರುವವರೊಂದಿಗೆ ಟೋನಿ ಅಲಾಮೊ ಎಡಭಾಗದಲ್ಲಿ*

ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವಾಗುವುದು ಎಂದು ದೇವರು ಅಬ್ರಾಮನಿಗೆ ಹೇಳಿದ ಬೀಜವು ತನ್ನೊಳಗೆ ನಿತ್ಯಜೀವವನ್ನು ಹೊಂದಿರುವ ಬೀಜವಾಗಿತ್ತು (ಆದಿಕಾಂಡ 12:3). ಎಲ್ಲಾ ಬೀಜಗಳಲ್ಲಿ ತಾತ್ಕಾಲಿಕ ಅಥವಾ ಅನಿತ್ಯ ಜೀವವಿರುತ್ತದೆ, ಆದರೆ ಕೇವಲ ಒಂದೇ ಬೀಜದಲ್ಲಿ ನಿತ್ಯಜೀವವಿದೆ, "ಆ ಬೀಜವೆಂದರೆ ದೇವರ ವಾಕ್ಯ", ಅದುವೇ ಯೇಸು (ಲೂಕ 8:11).[1] ಯೇಸುವೇ ಏಕೈಕ ಬೀಜ ಮತ್ತು ದೇವರ ವಾಕ್ಯ ಎಂಬ ಬೀಜವನ್ನು ಬಿತ್ತುವವರು (ಲೂಕ 8:5-15). ದೇವರ ಆಲಯ ಮತ್ತು ಕ್ರಿಸ್ತರ ದೇಹ, ಆತನ ಹೆಂಡತಿ ಆಗಿರುವ ಆತ್ಮದ ಮೂಲಕ ತಂದೆಯೊಂದಿಗೆ ಯೇಸು ನಮ್ಮಲ್ಲಿ ವಾಸವಾಗಿದ್ದಾರೆ, ಆದ್ದರಿಂದ ಆತ್ಮದ ಮೂಲಕ ನಾವು ನಿತ್ಯಜೀವದ ಬೀಜವನ್ನು ಬಿತ್ತುವವರಾಗಿದ್ದೇವೆ, ಅದು ಪುನಃ ಕ್ರಿಸ್ತರು, ದೇವರ ವಾಕ್ಯ (ಯೋಹಾನ 4:36).[2]

ಅಲ್ಲದೆ, ನಾವು, ಚರ್ಚಿನವರು ಎಂದರೆ ಲೋಕದ ಹೊರಗಿನವರು.[3] ಪುನಃ, ಬೀಜವಾದ ಯೇಸು ದೇವರ ಪದವಾಗಿದ್ದಾರೆ. ನಾವು, ಸಂತರು, ಲೋಕದಿಂದ ಹೊರಗಿನವರು, ಚರ್ಚ್ - ಇವೆಲ್ಲವು ಜೀವ, ನಿತ್ಯಜೀವ, ಅಮರತೆ ಇರುವ ಬೀಜ ಮತ್ತು ದೇವರ ಪದವೂ ಆಗಿದೆ, ಇದು ದೇಹದ ರೂಪ ಧರಿಸಿ ನಮ್ಮ ನಡುವೆ ವಾಸಿಸಿದ ದೇವರು, ಇಮ್ಮಾನುವೇಲ್, ಅಂದರೆ ದೇವರು ನಮ್ಮ ಜೊತೆಗಿದ್ದಾನೆ (ಮತ್ತಾಯ 1:23).

"ನಾನು ಬೈಬಲ್ ಅನ್ನು ಎಷ್ಟು ಓದಬೇಕೊ ಅಷ್ಟು ಓದುತ್ತಿಲ್ಲ ಎಂಬುದು ನನಗೂ ಗೊತ್ತು" ಎಂದು ಹೇಳುವ ಕೆಲವು ಮೂರ್ಖರು ತಾವು ಹೇಳುವ ಈ ಮೂರ್ಖ ಪದಗಳು ವಿನಯದ ಮತ್ತು ದೈನ್ಯತೆಯ, ಪ್ರಾಮಾಣಿಕ ತಪ್ಪೊಪ್ಪಿಗೆಯ ಒಂದು ರೂಪ, ಮತ್ತು ಈ ಆಲಸ್ಯದ ಮಾತುಗಳನ್ನು ಹೇಳುವ ಮೂಲಕ ತಾವು ತಪ್ಪಿಸಿಕೊಳ್ಳಬಹುದು ಎಂದು ಆಲೋಚಿಸುತ್ತ ಈ ರೀತಿ ಹೇಳುತ್ತಾರೆ. ಆದಾಗ್ಯೂ, ಅವರು ಕೇವಲ ಶಾಶ್ವತವಾಗಿ ತಮಗೆ ತಾವು ಹಾನಿಯನ್ನುಂಟುಮಾಡಿಕೊಳ್ಳುತ್ತಿದ್ದಾರೆ. ಏಕೆಂದರೆ "ಸಾರಿದ ವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ದೇವರ ವಾಕ್ಯವೇ ಆಧಾರ," ಅದು ಪುನಃ ಆ ಬೀಜ, ತನ್ನಲ್ಲಿ ನಿತ್ಯಜೀವವನ್ನು ಹೊಂದಿರುವ ಏಕೈಕ ವಸ್ತು (ರೋಮಾಪುರದವರಿಗೆ 10:17). ಆ ವಾಕ್ಯವು ದೇವರು (ಯೋಹಾನ 1:1). ದೇವರು ನಿತ್ಯ, ಆದ್ದರಿಂದ ದೇವರು ನಿಮ್ಮಲ್ಲಿ ಆ ವಾಕ್ಯದ ಕಾರಣದಿಂದ ವಾಸಿಸುತ್ತಿದ್ದರೆ, ನೀವು ಕೊನೆಯವರೆಗೂ ದೃಢವಾಗಿದ್ದರೆ, ನೀವು ಎಂದೂ ಸಾಯುವುದಿಲ್ಲ.[4]

ನಾವು ಭೂಮಿಯ ಮೇಲೆ ಕಾಣುವ ಎಲ್ಲವೂ ದೇವರ ವಾಕ್ಯದಿಂದ ನೆಲದಿಂದ ಪುನಃ ಜೀವಂತಗೊಂಡಿದೆ, ಇವುಗಳ ಮೂಲಕ ನಾವು, ವಿಶೇಷವಾಗಿ ದೇವರನ್ನು ತಿಳಿದವರು ಅಥವಾ ಆತನನ್ನು ಎಂದಾದರೂ ತಿಳಿದುಕೊಂಡಿರುವವರು, ಅದನ್ನು ಸ್ಪಷ್ಟವಾಗಿ ಕಾಣಬಹುದು.

"ಅಕೃತ್ಯವನ್ನೇ ಸತ್ಯವೆಂದು ಎಣಿಸುವ ಮಾನವರ ಎಲ್ಲ ಕುಕೃತ್ಯಗಳ ಮತ್ತು ದೇವವಿರೋಧಗಳ ಮೇಲೆ ದೇವರ ಸಿಟ್ಟು ದೇವಲೋಕದಿಂದ ಪ್ರಕಟವಾಗುತ್ತದೆ; ಏಕೆಂದರೆ ಅವರಲ್ಲಿ ಪ್ರಕಟವಾಗಿರುವ ದೇವರಿಗೆ ಇದು ವ್ಯಕ್ತವಾಗಿ ತಿಳಿಯಬಹುದು; ಇದನ್ನು ದೇವರು ಅವರ ಮೇಲೂ ತಿರುಗಿಸಬಹುದು. ಯಾಕೆಂದರೆ ದೇವರ ವಿಷಯವಾಗಿ ತಿಳಿಯಬಹುದಾದದ್ದು ಅವರ ಮನಸ್ಸಿಗೆ ಸ್ಪಷ್ಟವಾಗಿ ತಿಳಿದಿದೆ; ಅದನ್ನು ಅವರಿಗೆ ದೇವರೇ ಸ್ಪಷ್ಟವಾಗಿ ತೋರಿಸಿದನು. ಹೇಗಂದರೆ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತ್ತಿ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ; ಹೀಗಿರುವುದರಿಂದ ಅವರು ಉತ್ತರವಿಲ್ಲದವರಾಗಿದ್ದಾರೆ. ಯಾಕೆಂದರೆ ದೇವರ ವಿಷಯವಾಗಿ ಅವರಿಗೆ [ಹಿಂದಿನ ಕ್ರೈಸ್ತಮತೀಯರು] ತಿಳುವಳಿಕೆಯಿದ್ದರೂ ಅವರು ಆತನನ್ನು ದೇವರೆಂದು ಘನಪಡಿಸಲಿಲ್ಲ; ಆತನ ಉಪಕಾರಗಳನ್ನು ನೆನಸಿ ಆತನನ್ನು ಸ್ತುತಿಸಲಿಲ್ಲ. ಅವರು ವಿಚಾರ ಮಾಡಿಮಾಡಿ ಫಲ ಕಾಣಲಿಲ್ಲ; ವಿವೇಕವಿಲ್ಲದ ಅವರ ಬುದ್ಧಿಹೀನ ಹೃದಯ ಕತ್ತಲಾಯಿತು. ತಾವು ಜ್ಞಾನಿಗಳೆಂದು ಹೇಳಿಕೊಂಡು ಹುಚ್ಚರಾದರು. ಲಯವಿಲ್ಲದ ದೇವರ ಮಹಿಮೆಯನ್ನು ಬಿಟ್ಟು ಅದಕ್ಕೆ ಬದಲಾಗಿ ಲಯವಾಗುವ ಮನುಷ್ಯ ಪಶು ಪಕ್ಷಿ ಸರ್ಪಾದಿಗಳ ಮೂರ್ತಿಯನ್ನು ಮಾಡಿಕೊಂಡರು.

*(ಪುಟ 2ರಲ್ಲಿ ಮುಂದುವರಿದಿದೆ)*

**1** ಮತ್ತಾಯ 4:3-4, ಯೋಹಾನ 1:1, 14, 1 ಯೋಹಾನ 1:1-3, 5:11, ಪ್ರಕಟನೆ 19:13 **2** ಮಾರ್ಕ 16:15-16, 1 ಕೊರಿಂಥದವರಿಗೆ 1:21-24, 6:19, 2 ಕೊರಿಂಥದವರಿಗೆ 5:17-21 **3** ಯೋಹಾನ 15:16, 19, 17:6, 14-16, 2 ಕೊರಿಂಥದವರಿಗೆ 6:14-18, 1ಪೇತ್ರನು 2:9 **4** ಮತ್ತಾಯ 4:4, 10:22, 24:13, ಯೋಹಾನ 5:24, 6:63, 11:26, ಅಪೋಸ್ತಲರ ಕೃತ್ಯಗಳು 14:22, ರೋಮಾಪುರದವರಿಗೆ 11:22, ಕೊಲೊಸ್ಸೆಯವರಿಗೆ 1:22-23, 1 ತಿಮೊಥೆಯನಿಗೆ 4:16, 2 ತಿಮೊಥೆಯನಿಗೆ 2:1-3, 3:13-17, 4:5, ಯಾಕೋಬನು 5:10-11, 1 ಯೋಹಾನ 2:24-25

# ಒಂದೇ ಉಪಾಯ

*(ಪುಟ 1 ರಿಂದ ಮುಂದುವರಿದಿದೆ)*

ಆದಕಾರಣ ಅವರು ಮನಸ್ಸಿನ ದುರಾಶೆಗಳಂತೆ ನಡೆದು ತಮ್ಮ ದೇಹಗಳನ್ನು ಮಾನಹೀನಮಾಡಿಕೊಳ್ಳಲಿ ಎಂದು ದೇವರು ಅವರನ್ನು ಹೊಲಸಾದ ನಡತೆಗೆ ಒಪ್ಪಿಸಿದನು. ಅವರು ಸತ್ಯದೇವರನ್ನು ಬಿಟ್ಟು ಅಸತ್ಯವಾದದ್ದನ್ನು ಹಿಡಿದುಕೊಂಡು ಸೃಷ್ಟಿಕರ್ತನನ್ನು ಪೂಜಿಸದೆ ಸೃಷ್ಟಿವಸ್ತುಗಳನ್ನೇ ಪೂಜಿಸಿ ಸೇವಿಸುವವರಾದರು. ಸೃಷ್ಟಿಕರ್ತನೊಬ್ಬನೇ ನಿರಂತರವಾಗಿ ಸ್ತುತಿಹೊಂದತಕ್ಕವನು. ಆಮೆನ್. ಅವರು ಇಂಥದನ್ನು ಮಾಡಿದ್ದರಿಂದ ದೇವರು ಅವರನ್ನು ಕೇವಲ ತುಚ್ಛವಾದ ಕಾಮಾಭಿಲಾಷೆಗೆ ಒಪ್ಪಿಸಿದನು. ಹೇಗೆಂದರೆ ಅವರ ಹೆಂಗಸರು ಸ್ವಾಭಾವಿಕವಾದ ಭೋಗವನ್ನು ಬಿಟ್ಟು ಸ್ವಭಾವಕ್ಕೆ ವಿರುದ್ಧವಾದ ಭೋಗವನ್ನು ಅನುಸರಿಸಿದರು. ಅದರಂತೆ ಗಂಡಸರು ಸಹ ಸ್ವಾಭಾವಿಕವಾದ ಸ್ತ್ರೀಭೋಗವನ್ನು ಬಿಟ್ಟು ಒಬ್ಬರ ಮೇಲೊಬ್ಬರು ತಮ್ಮ ಕಾಮಾತುರದಿಂದ ತಾಪಪಡುತ್ತಾ ಗಂಡಸರ ಸಂಗಡ ಗಂಡಸರು ಕೇವಲ ಅವಲಕ್ಷಣವಾದದ್ದನ್ನು ನಡೆಸಿ ತಮ್ಮ ತಪ್ಪಿಗೆ ತಕ್ಕ ಫಲವನ್ನು ತಮ್ಮಲ್ಲಿ ಹೊಂದುವವರಾದರು.

"ಇದಲ್ಲದೆ ದೇವರ ಜ್ಞಾನವು ಅವರಿಗೆ ಇಷ್ಟವಿಲ್ಲದ್ದರಿಂದ ಅಲ್ಲದ ಕೃತ್ಯಗಳನ್ನು ಮಾಡುವವರಾಗುವಂತೆ ದೇವರು ಅವರನ್ನು ಅನಿಷ್ಟಭಾವಕ್ಕೆ ಒಪ್ಪಿಸಿದನು. ಹೇಗೆಂದರೆ ಅವರು ಸಕಲ ವಿಧವಾದ ಅನ್ಯಾಯ ದುರ್ಮಾರ್ಗತನ ಲೋಲುಪ್ತಿ ದುಷ್ಟತ್ವಗಳಿಂದಲೂ ಹೊಟ್ಟೆಕಿಚ್ಚು ಕೊಲೆ ಜಗಳ ಮೋಸ ಹಗೆತನಗಳಿಂದಲೂ ತುಂಬಿದವರಾದರು. ಅವರು ಕಿವಿಊದುವವರೂ ಚಾಡಿಹೇಳುವವರೂ ದೇವರನ್ನು ದ್ವೇಷಿಸುವವರೂ ಸೊಕ್ಕಿನವರೂ ಅಹಂಕಾರಿಗಳೂ ಬಡಾಯಿಕೊಚ್ಚುವವರೂ ಕೇಡನ್ನು ಕಲ್ಪಿಸುವವರೂ ತಂದೆತಾಯಿಗಳ ಮಾತನ್ನು ಕೇಳದವರೂ ವಿವೇಕವಿಲ್ಲದವರೂ ಮಾತಿಗೆ ತಪ್ಪುವವರೂ ಮಮತೆಯಿಲ್ಲದವರೂ ಕರುಣೆಯಿಲ್ಲದವರೂ ಆದರು. ಇಂಥವುಗಳನ್ನು ನಡೆಸುವವರು ಮರಣಕ್ಕೆ ಪಾತ್ರರಾಗಿದ್ದಾರೆಂಬ ದೇವವಿಧಿಯು ಅವರಿಗೆ ತಿಳಿದಿದ್ದರೂ ಅವರು ತಾವೇ ಅವುಗಳನ್ನು ಮಾಡುವುದಲ್ಲದೆ ಮಾಡುವವರನ್ನೂ ಅನುಮೋದಿಸಿದರು" (ರೋಮಾಪುರದವರಿಗೆ 1:18-32).[5]

ಈಗ ಲೋಕ ಪುನಃ ನೋಹನ ಕಾಲದಲ್ಲಿದ್ದ ಲೋಕದಂತೆಯೇ ಆಗಿದೆ (ಆದಿಕಾಂಡ 6:5-7, ಮತ್ತಾಯ 24:37-44). ಇಂದು ಜನರ ಮನಸ್ಸು ದೇವರ ಸತ್ಯವನ್ನು ಸುಳ್ಳಾಗಿಸಿದೆ (ರೋಮಾಪುರದವರಿಗೆ 1:21-25).[6] ತನ್ನಲ್ಲಿ ನಿತ್ಯಜೀವವಿರುವ ಏಕೈಕ ಬೀಜವೇ ಆತ ಎಂಬುದು ದೇವರ ಸತ್ಯ. ಅವರು ನೋಹನ ಕಾಲದಲ್ಲಿ ಹೇಳಿದಂತೆಯೆ ಇಂದು ಕೂಡ ಹೇಳುತ್ತಿದ್ದಾರೆ - ಅದೇನೆಂದರೆ ನಿತ್ಯಜೀವದ ಏಕೈಕ ಬೀಜವೇ ದೇವರು ಎಂಬ ಸತ್ಯವೇ ಸುಳ್ಳು ಎಂದು ಅವರು ಹೇಳುತ್ತಿದ್ದು, ನಮ್ಮ ಮಕ್ಕಳಿಗೆ ಈ ಕೆಟ್ಟದಾದ, ಭ್ರಷ್ಟವಾದ ಮತ್ತು ಬಹಳ ಅಪಮಾನಕರವಾದ ವಿಕೃತವನ್ನು ಎಲ್ಲಾ ಶಾಲೆಗಳಲ್ಲಿ ಹೇಳಿಕೊಡುತ್ತಿದ್ದಾರೆ. ಅವರು ಒಬ್ಬರನ್ನೊಬ್ಬರು ಮದುವೆಯಾಗುವುದು ಸಾಲದು. ದೇವರ ಸತ್ಯವು ಸುಳ್ಳು ಎಂದು ನಮ್ಮ ಮಕ್ಕಳಿಗೆ ಹೇಳಿಕೊಡಲು ಬಯಸುತ್ತಿದ್ದಾರೆ. ಅವರು ತಮ್ಮಲ್ಲಿ ಪಿಶಾಚಿಗಳನ್ನು (ಸಲಿಂಗಕಾಮಿ ಪಿಶಾಚಿಗಳನ್ನು) ಸ್ವೀಕರಿಸಿದ್ದಾರೆ, ಲೌಕಿಕವಾದವುಗಳನ್ನು ಪೂಜಿಸಲು ಕಾರಣವಾದ, ಸೃಷ್ಟಿಕರ್ತನನ್ನು (ರೋಮಾಪುರದವರಿಗೆ 1:25) ಆರಾಧಿಸುವುದಕ್ಕಿಂತ ಹೆಚ್ಚಾಗಿ ಸೃಷ್ಟಿಯಾದುದನ್ನು ಆರಾಧಿಸುವಂತೆ ಮಾಡುವ ಬಲಿಷ್ಠ ಪಿಶಾಚಿಗಳು. ಈ ಕಾರಣಕ್ಕಾಗಿ, ದೇವರು ಅವರನ್ನು ಬಿಟ್ಟುಬಿಟ್ಟಿದ್ದಾರೆ. ಆತ ಅವರನ್ನು, ಅವರು ಬಹಳವಾಗಿ ಪ್ರೀತಿಸುವ, ತುಚ್ಛವಾದ ಕಾಮಾಭಿಲಾಷೆಗೆ, ಅವರ ಸ್ವಂತ ತುಚ್ಛ ಕಾಮಾಭಿಲಾಷೆಗಳಿಗೆ ಒಪ್ಪಿಸಿದನು. ಅವರು ತನ್ನನ್ನು ಮತ್ತು ತನ್ನ ನಿತ್ಯಜೀವವನ್ನು ಹೇಗೆ ತಿರಸ್ಕರಿಸಿದ್ದಾರೆ, ಮತ್ತು ಅವರು ಅದರೊಂದಿಗೆ ಆತನ ವಿರುದ್ಧ ದುಷ್ಟರೀತಿಯಲ್ಲಿ ಹೋರಾಡುತ್ತಾರೆ ಎಂದು ನೋಡುತ್ತಾರೆ, ಆದ್ದರಿಂದ ದೇವರು ಅವರೊಂದಿಗೆ ಇನ್ನು ಮುಂದೆ ವ್ಯವಹರಿಸುವುದಿಲ್ಲ. ದೇವರು ಅವರನ್ನು ಬಿಟ್ಟುಕೊಡುತ್ತಾರೆ ಮತ್ತು ಅವರಿಗೆ ಬೇಕಾದುದನ್ನು ಪಡೆಯಲು ಬಿಡುತ್ತಾರೆ, ಅದೇನೆಂದರೆ ತುಚ್ಛವಾದ ಕಾಮಾಭಿಲಾಷೆಗಳು! ಅವರು ಆರಿಸಿದ್ದನ್ನು ಮಾಡಲು ಆತ ಅವರಿಗೆ ಸ್ವಾತಂತ್ರ್ಯ ನೀಡುತ್ತಾರೆ - ಸ್ತ್ರೀಯರೊಂದಿಗೆ ಸ್ತ್ರೀಯರು, ಗಂಡಸರೊಂದಿಗೆ ಗಂಡಸರು, ಸಲಿಂಗ ಸ್ತ್ರೀಕಾಮ ಮತ್ತು ಪುರುಷ ಸಲಿಂಗಕಾಮ.

ಆದಾಗ್ಯೂ, ದೇವರ ಬೀಜ, ನಿತ್ಯಜೀವದ ದೇವರ ಬೀಜ, ದುಷ್ಟವಾದ ಆತ್ಮದಲ್ಲಿ ವಾಸಿಸುವುದಿಲ್ಲ, ಏಕೆಂದರೆ ಇದು ದೇವರ ಸತ್ಯವನ್ನು ಸುಳ್ಳಾಗಿ ಬದಲಾಯಿಸುತ್ತದೆ! ಈ ಸಲಿಂಗಕಾಮಿ ಪಿಶಾಚಿ ಬಲಿಷ್ಠವಾಗಿದೆ, ಆದರೆ ಯೇಸು, ತನ್ನಲ್ಲಿ ನಿತ್ಯಜೀವವನ್ನು ಹೊಂದಿರುವ ಬೀಜ, ಇನ್ನೂಹೆಚ್ಚು ಬಲಿಷ್ಠವಾ-






*ಭಾರತದ ಆಂಧ್ರಪ್ರದೇಶದ ಹಳ್ಳಿಗಳಲ್ಲಿ ಪ್ಯಾಸ್ಟರ್ ಪಿ ವಿ ರತ್ನಮ್ ಅವರು ಪ್ಯಾಸ್ಟರ್ ಅಲಾಮೊ ಅವರ ಸಾಹಿತ್ಯವನ್ನು ವಿತರಿಸುತ್ತಿರುವುದು*

---

5 ಆದಿಕಾಂಡ 19:1-13, 24-25, ಯಾಜಕಕಾಂಡ 18:22, 20:13, ಧರ್ಮೋಪದೇಶಕಾಂಡ 22:5, 23:17-18, ನ್ಯಾಯಸ್ಥಾಪಕರು 19:22-28, 1 ಅರಸುಗಳು 14:24, 15:11-12, 2 ಅರಸುಗಳು 22:1-2, 23:7, ಯೆಹೆಜ್ಕೇಲನು 16:49-50, ರೋಮಾಪುರದವರಿಗೆ 1:18-32, 1 ಕೊರಿಂಥದವರಿಗೆ 6:9-10, 1 ತಿಮೊಥೆಯನಿಗೆ 1:9-10, 2 ತಿಮೊಥೆಯನಿಗೆ 3:1-5, ಯೂದನು 7, ಪ್ರಕಟನೆ 22:14-15

6 1 ತಿಮೊಥೆಯನಿಗೆ 4:1-3, 2 ತಿಮೊಥೆಯನಿಗೆ 4:3-4, 2 ಪೇತ್ರನು 2:1-3

## ನೈಜೀರಿಯ

ಪ್ರೀತಿಯ ಪ್ಯಾಸ್ಟರ್ ಟೋನಿ,

ಯೇಸುವಿನ ಹೆಸರಿನಲ್ಲಿ ನಿಮಗೆ ನಮಸ್ಕಾರ. ರೇಡಿಯೊ ಆಫ್ರಿಕಾದಲ್ಲಿ ನಿಮ್ಮ ರೇಡಿಯೊ ಕಾರ್ಯಕ್ರಮ ಮತ್ತು ನಾನು ಓದಿದ ನಿಮ್ಮ ಸುವಾರ್ತಾ ಸಾಹಿತ್ಯದ ಮೂಲಕ ನಾನು ಈಗಾಗಲೆ ದೇವರ ಸೇವಕನಾಗಿದ್ದೇನೆ ಎಂದು ಹೇಳಲು ನನಗೆ ಸಂತೋಷವಾಗುತ್ತದೆ. ದೇವರ ಪದವನ್ನು ಇಲ್ಲಿರುವ ನಮಗೆ ನೀವು ಪ್ರಸಾರ ಮಾಡುತ್ತಿರುವ ರೀತಿಗಾಗಿ ನಾನು ನಿಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮತ್ತು ನಾನು ಹೊಸದಾಗಿ ಮತಾಂತರಗೊಂಡಿರುವವನು ಮತ್ತು ನನಗೆ ಒಂದು ಸಂಪೂರ್ಣ ಪವಿತ್ರ ಬೈಬಲ್ ಅನ್ನು ಮತ್ತು ಸುದ್ದಿಪತ್ರಿಕೆಗಳನ್ನು ಮೆಸ್ಸೈಅ ಪುಸ್ತಕಗಳೊಂದಿಗೆ ನನಗೆ ಕಳುಹಿಸಬೇಕೆಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ನಾನು ಕಳೆದುಹೋಗಿ ಮತ್ತೆ ಸಿಕ್ಕಿದ್ದೇನೆ.

ಪ್ರಭುವು ನಿಮ್ಮ ಮಿನಿಸ್ಟ್ರಿಯನ್ನು ಸಮೃದ್ಧವಾಗಿ ಅನುಗ್ರಹಿಸಲಿ. ನಿಮ್ಮಿಂದ ಬೇಗನೆ ಉತ್ತರ ಪಡೆಯುವ ನಿರೀಕ್ಷೆಯಲ್ಲಿ

ನಿಮ್ಮ ವಿಶ್ವಾಸಿ,
ಮೋನೆ ಅಕಿನ್ವ ಮತ್ತು ಕುಟುಂಬದವರು
ಸನ್ ಶೈನ್ ಸ್ಟೇಟ್, ನೈಜೀರಿಯ



ಗಿದ್ದಾರೆ.[7] ಸೈತಾನನನ್ನು ವಿರೋಧಿಸಬೇಕು ಮತ್ತು ಅವನು ನಮ್ಮಿಂದ ಓಡಿಹೋಗುವನು ಎಂದು ದೇವರು ನಮಗೆ ಹೇಳುತ್ತಾರೆ (ಯಾಕೋಬನು 4:7).[8] ಆದರೆ ನಾವು ಸಲಿಂಗಕಾಮವನ್ನು ವಿರೋಧಿಸಿದರೆ, ದ್ವೇಷದ ಅಪರಾಧವನ್ನು ಮಾಡುತ್ತಿದ್ದೇವೆ ಎಂದು ವಿಶ್ವ ಸರ್ಕಾರ ಹೇಳುತ್ತದೆ.

ಯೇಸು ಪುನಃ ಸ್ವರ್ಗಾರೋಹಣ ಮಾಡುವುದಕ್ಕಿಂತ ಮುನ್ನ, ಆತ ಸಾವು, ನರಕ, ಗೋರಿ, ಸೈತಾನ, ಮತ್ತು ಎಲ್ಲಾ ದುಷ್ಟ ಪಿಶಾಚಿಗಳನ್ನು ಜಯಿಸಿದರು, ಆದರೆ ನಿತ್ಯಜೀವವನ್ನು ತಿರಸ್ಕರಿಸುವ ಯಾರಿಗೇ ಆಗಲಿ ಅವರ ಭ್ರಷ್ಟ ನಿರ್ಧಾರಗಳಿಗಾಗಿ ಪ್ರತಿಫಲ ಸಿಗುತ್ತದೆ.[9] ಅವರು ತಮ್ಮ ಭ್ರಾಂತಿಗೆ ತಕ್ಕ ಫಲವನ್ನು ತಮ್ಮಲ್ಲಿ ಹೊಂದುವರು, ಅದೇನೆಂದರೆ ನರಕ ಮತ್ತು ಬೆಂಕಿಯ ಕೆರೆ ನಿರಂತರವಾಗಿ ಪೀಡಿಸುತ್ತವೆ. ನೋಹನ ದಿವಸಗಳಲ್ಲಿ ನಡೆದ ಹಾಗೆಯೇ ಅವರು ತಮಗೆ ಮಾಡಿಕೊಳ್ಳುತ್ತಿದ್ದಾರೆ (ಲೂಕ 17:26-30).

ಭೂಲೋಕವನ್ನೆಲ್ಲ ಮರುಳುಗೊಳಿಸಿರುವ ಸೈತಾನನನ್ನು ಅನುಸರಿಸುವುದು ವಾಡಿಕೆಯಾಗಿದೆ (ಪ್ರಕಟನೆ 12:9).[10]

ಮಾಧ್ಯಮಗಳು ಮತ್ತು ಸರ್ಕಾರ ಮಾಡುತ್ತಿರುವುದೇನೆಂದರೆ ದೇವರ ಪದವನ್ನು ದ್ವೇಷದ ಅಪರಾಧವನ್ನಾಗಿ ಮಾಡುತ್ತಿರುವುದು, ಆದರೆ ಅದುವೇ ಏಕೈಕ ಬದುಕು ಮತ್ತು ನರಕ ಮತ್ತು ಬೆಂಕಿಯ ಕೆರೆಯಲ್ಲಿ ಸಂಕಟ ಮತ್ತು ಹಿಂಸೆಯ ನಿರಂತರತೆಯಿಂದ ಪಾರಾಗುವ ಮಾರ್ಗ. ನಿಮ್ಮ ಆತ್ಮದ ಕಾಳಜಿ ವಹಿಸುವವರು ಕೇವಲ ಯೇಸು ಮತ್ತು ಆತನ ಜನರು ಮಾತ್ರ. ಬೇರೆ ರೀತಿಯಲ್ಲಿ ನಿಮ್ಮ ಮನವೊಲಿಸಲು ಸೈತಾನನ ಆತ್ಮಕ್ಕೆ ಅವಕಾಶ ಕೊಡಬೇಡಿ. ನೀವು ಆ ರೂಪದಲ್ಲಿ ಹುಟ್ಟಲಿಲ್ಲ. ನೀವು ಬಹಳ ಚಿಕ್ಕವರಾಗಿದ್ದಾಗ, ಪಿಶಾಚಿಯು ನಿಮ್ಮೊಳಗೆ ಸೇರಿಕೊಂಡಿರಬಹುದು, ಆದರೆ ಯೇಸು ಪಿಶಾಚಿಗಳನ್ನು ಜನರಿಂದ ಹೊರತೆಗೆಯುತ್ತಾರೆ.[11] ಆತನೇ ಜೀವ ಮತ್ತು ಹೆಚ್ಚು ಸಮೃದ್ಧವಾದ ಜೀವ.[12] "ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು" (ಯೋಹಾನ 10:10).

ನಿರಂತರ ದಂಡನೆಯಿಂದ ಪಾರಾಗುವುದು ಹೇಗೆಂದು ನಾನು ನಿಮಗೆ ತೋರಿಸಿದರೆ ಇದೊಂದು ದ್ವೇಷದ ಅಪರಾಧ ಎಂದು ನೀವು ನಂಬಬಹುದು. ಇಲ್ಲಿ ಬದುಕು ಚಿಕ್ಕದು, ಆದರೆ ನಿರಂತರತೆ ಬಹಳ ದೀರ್ಘವಾದುದು.[13] ಅದು ಎಂದೂ ಕೊನೆಗೊಳ್ಳುವುದಿಲ್ಲ. ಜನರ ಆತ್ಮಗಳು ಶಾಶ್ವತವಾಗಿ ಒಂದೋ ಸ್ವರ್ಗದಲ್ಲಿರುತ್ತವೆ

*(ಪುಟ 4ರಲ್ಲಿ ಮುಂದುವರಿದಿದೆ)*

**7** ಧರ್ಮೋಪದೇಶಕಾಂಡ 4:39, 32:39, 1 ಸಮುವೇಲನು 2:6-8, 1 ಪೂರ್ವಕಾಲವೃತ್ತಾಂತ 29:11-12, 2 ಪೂರ್ವಕಾಲವೃತ್ತಾಂತ 20:6, ಕೀರ್ತನೆಗಳು 46:1, ಯೆಶಾಯ 44:6, 45:23, ಯೆರೆಮೀಯ 10:10, 18:6, ದಾನಿಯೇಲನು 4:35-37, ಯೋಹಾನ 10:29, ಅಪೋಸ್ತಲರ ಕೃತ್ಯಗಳು 17:24-26, ಪ್ರಕಟನೆ 1:12-18 **8** ಮತ್ತಾಯ 4:1-11, ರೋಮಾಪುರದವರಿಗೆ 12:9, ಎಫೆಸದವರಿಗೆ4:27, 5:3-17, 1 ಥೆಸಲೋನಿಕದವರಿಗೆ 5:21-22 **9** 1 ಪೂರ್ವಕಾಲವೃತ್ತಾಂತ 28:9, ಯೋಬನು 4:7-9, 21:14-20, ಜ್ಞಾನೋಕ್ತಿಗಳು 1:22-32, 8:36, 10:25, ಯೆಶಾಯ 1:15-20, ದಾನಿಯೇಲನು 12:2-3, ಲೂಕ 12:4-9, ಯೋಹಾನ 3:16-21, 36, ರೋಮಾಪುರದವರಿಗೆ 1:18, 1 ಕೊರಿಂಥದವರಿಗೆ 6:9-10, ಯೂದನು 14-15, ಪ್ರಕಟನೆ 20:11-15, 21:8, 27 **10** ಮತ್ತಾಯ 24:11-12, 24, 1 ತಿಮೊಥೆಯನಿಗೆ 4:1-2, 2 ತಿಮೊಥೆಯನಿಗೆ 3:13, 2 ಪೇತ್ರನು 2:1-3, ಪ್ರಕಟನೆ 13:1-4, 11-15, 14:8, 17:8, 18:2-3, 23

**11** ಮತ್ತಾಯ 8:16-17, 28-34, 9:32-33, 10:1, ಮಾರ್ಕ 1:34, 39, 7:25-30, 9:17-27, 16:9, ಲೂಕ 11:14 **12** ಯೋಹಾನ 11:25-26, 14:6 **13** 2 ಸಮುವೇಲನು 14:14, 1 ಪೂರ್ವಕಾಲವೃತ್ತಾಂತ 29:15, ಯೋಬನು 7:6-10, 8:9, 9:25-26, 14:1-2, ಕೀರ್ತನೆಗಳು 22:29, 39:4-6, 11, 78:39, 89:47-48, 90:5-6, 9-10, 102:11, 103:14-16, 144:3-4, 146:4, ಪ್ರಸಂಗಿ 1:4, 3:19-21, 6:12, 12:7, ಯೆಶಾಯ 2:22, 40:6-8, 24, 51:12, ಯಾಕೋಬನು 1:10-11, 4:14, 1 ಪೇತ್ರನು 1:24

## ಕಾಂಗೊ

*(ಫ್ರೆಂಚ್ ಭಾಷೆಯಿಂದ ಅನುವಾದಿಸಲಾಗಿದೆ)*

ವಿಶ್ವ ಪ್ಯಾಸ್ಟರ್ ಟೋನಿ ಅಲಾಮೊ,

ಕ್ರಿಸ್ತರಲ್ಲಿ ಶಾಂತಿ ಇರಲಿ! ನಾನು ಪ್ಯಾಸ್ಟರ್ ಆಂದ್ರೆ ಹಿಲೇರಿಯನ್, ನಿಮ್ಮ ಸುದ್ದಿಪತ್ರಿಕೆಗಳ ಅತಿ ದೊಡ್ಡ ಓದುಗರಲ್ಲಿ ಒಬ್ಬನು. ನಿಮ್ಮ ಪ್ರಕಾಶನಗಳನ್ನು ನಾನು ಕಂಡುಹಿಡಿದಿದ್ದು ನಿಜವಾಗಿ 2006ರಲ್ಲಿ ಮತ್ತು ಅವು ನನ್ನ ಮಿನಿಸ್ಟ್ರಿಯನ್ನು ಸಂಪೂರ್ಣವಾಗಿ ಬದಲಾಯಿಸಿದವು. ಏಕೆಂದರೆ ನಾನು ಅವನ್ನು ಓದಿದಾಗ ಪವಿತ್ರಾತ್ಮವು ನನ್ನ ಕಣ್ಣುಗಳನ್ನು ತೆರೆಯಿತು. ಈ ಕಾರಣಕ್ಕಾಗಿ, ನಾನು ಪ್ಯಾಸ್ಟರ್ ಆಗಿರುವ ಚರ್ಚ್ ನಲ್ಲಿ, ನಾವು ಈಗ ಸಾರ್ವಜನಿಕ ಸ್ಥಳಗಳಲ್ಲಿ ಸಾಕ್ಷಿಯಾಗಲು ಸಾಧನವನ್ನಾಗಿ "ಪೋಪ್ ಅವರ ರಹಸ್ಯಗಳು" ಸಾಹಿತ್ಯವನ್ನು ಬಳಸುತ್ತಿದ್ದೇವೆ, ಮತ್ತು ಪ್ರಭುವು ಈಗ ಶ್ರೇಷ್ಠ ಕೆಲಸಗಳನ್ನು ಮಾಡುತ್ತಿದ್ದಾರೆ. ಅದನ್ನು ಓದಿ ಸ್ವೀಕರಿಸಿದ ನಂತರ, ತಮ್ಮ ಹೊಸ ಬದುಕುಗಳನ್ನು ಪ್ರಾರಂಭಿಸಲು ಯೇಸುವಿಗೆ ತಮ್ಮ ಹೃದಯಗಳನ್ನು ಕೊಡುವ ಮೂಲಕ ಪವಿತ್ರಾತ್ಮದಿಂದ ಪ್ರಭಾವಿತರಾಗುತ್ತಿರುವ ಹೊಸ ಆತ್ಮಗಳನ್ನು ನಾವು ಪ್ರತಿ ವಾರ ಸ್ವಾಗತಿಸುತ್ತಿದ್ದೇವೆ.

ಆದ್ದರಿಂದ, ನಾವು ಏನನ್ನು ಕೇಳುತ್ತಿದ್ದೇವೆ ಎಂದರೆ, ಪ್ಯಾಸ್ಟರ್ ಟೋನಿ ಅಲಾಮೊ ಅವರ ಸಾಹಿತ್ಯಕ್ಕಾಗಿ ಒಂದು ವಿತರಣಾ ಕೇಂದ್ರವನ್ನು ರಚಿಸಲು ನಮಗೆ ಅವಕಾಶ ನೀಡುವಂತೆ ಫ್ರೆಂಚ್ ನಲ್ಲಿ ಲೇಖನಗಳಿರುವ ಇನ್ನೂ ಹೆಚ್ಚಿನ ಮೇಲ್ ಗಳನ್ನು ನಿಯತವಾಗಿ ದಯವಿಟ್ಟು ಕಳುಹಿಸಿ.

ಉಳಿದಂತೆ, ಪ್ಯಾಸ್ಟರ್ ಟೋನಿ ಅಲಾಮೊ, ನಿಮ್ಮ ದೇವರೇ ನಮ್ಮ ದೇವರು. ನಿಮ್ಮ ಧ್ಯೇಯವು ನಮ್ಮ ಧ್ಯೇಯ ಕೂಡ ಆಗಿದೆ. ಮತ್ತು ನಿಮ್ಮ ಹೋರಾಟ ನಮ್ಮ ಹೋರಾಟ ಕೂಡ. ನಾವು ಮುಂಚಿತವಾಗಿ ನಿಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ, ಮತ್ತು ನೀವು ನಮಗಾಗಿ ಮತ್ತು ಪ್ರತಿಯೊಂದು ದೇಶದ ಜನರಿಗಾಗಿ ಅನುಗ್ರಹದ ಹೆಚ್ಚಿನ ಮಾಧ್ಯಮವಾಗುತ್ತೀರಿ ಎಂದು ನಾವು ಸರ್ವಶಕ್ತನಾದ ದೇವರಲ್ಲಿ ಪ್ರಾರ್ಥಿಸುತ್ತಿದ್ದೇವೆ.

ಆಂದ್ರೆ ಹಿಲೇರಿಯನ್
ಕಿಂಪೀಸೆ, ಡೆಮೊಕ್ರ್ಯಾಟಿಕ್ ರಿಪಬ್ಲಿಕ್ ಆಫ್ ದ ಕಾಂಗೊ

## ಮಿಸೂರಿ

ಪ್ರೀತಿಯ ಪ್ಯಾಸ್ಟರ್ ಟೋನಿ ಅಲಾಮೊ,

ನಾನು ನಿಮ್ಮ ಮಿನಿಸ್ಟ್ರಿಗಾಗಿ ಮತ್ತು ದೇವರು ನಿಮಗೆ ನೀಡಿರುವ ಸತ್ಯಗಳ ಪ್ರಕಟನೆಗಳಿಗಾಗಿ ಕೃತಜ್ಞನಾಗಿದ್ದೇನೆ. ನೀವು ನಿಜವಾಗಿಯೂ ನನ್ನ ಕಣ್ಣುಗಳನ್ನು ತೆರೆದಿದ್ದೀರಿ ಮತ್ತು ದೇವರಲ್ಲಿ ನನ್ನ ವಿಶ್ವಾಸವನ್ನು ಬಲಗೊಳಿಸಿದ್ದೀರಿ, ಸೈತಾನನ, ವಿಶ್ವ ಸರ್ಕಾರದ, ನಮ್ಮ ವಿರುದ್ಧ ಅದರ ಕಾರ್ಯಾಚರಣೆಗಳ, ಹೆಂಡತಿಯ, ಮತ್ತು ಈ ಕಳೆದು ಹೋದ ಜಗತ್ತಿನಲ್ಲಿ ಅವನಿಂದ ಬಳಸಲ್ಪಟ್ಟ ಇತರ ಎಲ್ಲರ ವಂಚನೆಗಳನ್ನು ನನಗೆ ತೋರಿಸಿದ್ದೀರಿ.

ನಿಮ್ಮ ಬಳಿ ಇರುವ ಎಲ್ಲಾ ಸಾಮಗ್ರಿಗಳನ್ನು ದಯವಿಟ್ಟು ನನಗೆ ಕಳುಹಿಸಿ. ನನಗೆ ಅವೆಲ್ಲವೂ ಬೇಕು. ನಿಮಗೆ ಬಹಳ ಧನ್ಯವಾದಗಳು ಮತ್ತು ಜೀವಂತ ದೇವರು ತನ್ನ ಕೃಪೆ ಮತ್ತು ಶಕ್ತಿಯಲ್ಲಿ ನಿಮ್ಮನ್ನು ಮತ್ತು ನಿಮ್ಮ ಮಿನಿಸ್ಟ್ರಿಯನ್ನು ಸಮೃದ್ಧವಾಗಿ ಅನುಗ್ರಹಿಸಲಿ!

ನಿಮ್ಮ ಪ್ರಾರ್ಥನಾ ಪಟ್ಟಿಯಲ್ಲಿ ನನ್ನ ಹೆಸರನ್ನು ದಯವಿಟ್ಟು ಹಾಕಿ.

ಕ್ರಿಸ್ತರಲ್ಲಿ,
ಟೆರಿ ಬರ್ಮಿಂಗ್ಯಾಮ್ — ಕ್ಯಾಮೆರೂನ್, ಎಮ್ಒ

## ಭಾರತ

ಪ್ರೀತಿಯ ಪ್ಯಾಸ್ಟರ್ ಟೋನಿ,

ನಾನು ಹತ್ತು ದಿನಗಳ ಹಿಂದೆ ನಮ್ಮ ಹಳೆಯ ಮನೆಯನ್ನು ನೋಡಲು ನನ್ನ ತಂದೆಯ ಗ್ರಾಮ, ಸಂದಿಪುಡಿಗೆ ಹೋದೆ. ಅಲ್ಲಿ ಒಬ್ಬ ವಿಶ್ವಾಸಿ ಬಹಳ ಕಾಯಿಲೆಯಿಂದ ಹಾಸಿಗೆಯಲ್ಲಿ ಮಲಗಿದ್ದಳು ಮತ್ತು ಅವಳು ಸತ್ತಿರಬಹುದೆಂದು ಜನರು ಭಾವಿಸಿದ್ದರು, ಆದರೆ ನಾನು ಅವಳಿಗೆ ಭೇಟಿ ನೀಡಿ ಅವಳಿಗಾಗಿ ಪ್ರಾರ್ಥಿಸಿದೆ. ದೇವರು ಆ ಪ್ರಾರ್ಥನೆಗಳನ್ನು ಕೇಳಿದರು ಮತ್ತು ಅವಳನ್ನು ಸಂಪೂರ್ಣವಾಗಿ ಗುಣಮುಖಗೊಳಿಸಿದರು. ಈ ಕೃತ್ಯದ ಬಳಿಕ ಆ ಸಂಪೂರ್ಣ ಬೀದಿ ನನ್ನನ್ನು ಬಹಳ ಗೌರವಿಸುತ್ತದೆ, ಆದರೆ ನಾನು ನಂಬಿಕೆಯಿಂದ ಅವರಿಗೆ, "ಇದನ್ನು ಮಾಡಿದ್ದು ನಾನಲ್ಲ, ಯೇಸು ಕ್ರಿಸ್ತರು. ನಾವು ಆತನಿಗೆ ಭಕ್ತಿಪೂರ್ಣ ಕೃತಜ್ಞತೆಯನ್ನು ಮತ್ತು ಗೌರವವನ್ನು ಸಲ್ಲಿಸೋಣ" ಎಂದು ಹೇಳಿದೆನು.

ನಿಮ್ಮ ಅಮೂಲ್ಯ ಪ್ರಾರ್ಥನೆಗಳು ಆತನ ಮಿನಿಸ್ಟ್ರಿಯಲ್ಲಿ ನನಗೆ ನೆರವಾದವು ಎಂದು ನಾನು ದೃಢವಾಗಿ ನಂಬುತ್ತೇನೆ. ಕೃತ್ಯಗಳು ಮತ್ತು ಪದಗಳ ಮೂಲಕ ನಾವು ಆತನ ಮಹಿಮೆಯನ್ನು ಕೊಂಡಾಡೋಣ.

ನಿಮ್ಮೆಲ್ಲರಿಗೂ ಧನ್ಯವಾದಗಳು. ನನಗಾಗಿ ಮತ್ತು ನಮ್ಮ ಮಿನಿಸ್ಟ್ರಿಗಾಗಿ ದಯವಿಟ್ಟು ಇನ್ನೂ ಹೆಚ್ಚು ಪ್ರಾರ್ಥಿಸಿ.

ಆತನ ಪ್ರೀತಿಯಲ್ಲಿ,
ನಿಮ್ಮ ಸಹೋದರ,
ರಾಜೇಶ್ ತಾತಪುಡಿ
ಆಂಧ್ರ ಪ್ರದೇಶ, ಭಾರತ

# ಒಂದೇ ಉಪಾಯ

*(ಪುಟ 3 ರಿಂದ ಮುಂದುವರಿದಿದೆ)*

ಅಥವಾ ನರಕದಲ್ಲಿರುತ್ತವೆ.[14] ನಾವೆಲ್ಲರೂ ಮನುಷ್ಯರು. ನಮಗೆಲ್ಲರಿಗೂ ಬದುಕು ಅಥವಾ ಸಾವು, ಒಳ್ಳೆಯದು ಅಥವಾ ದುಷ್ಟತನ, ದೇವರು ಅಥವಾ ಸೈತಾನನನ್ನು ಆರಿಸುವ ಹಕ್ಕು ನೀಡಲಾಗಿದೆ. ದೇವರ ಪವಿತ್ರಾತ್ಮ ನಿಮ್ಮೊಳಗೆ ಸೇರಿಕೊಂಡಾಗ ಮತ್ತು ಆತನನ್ನು, ಆತನ ಪದವನ್ನು ದಿನನಿತ್ಯ ಸ್ವಾಗತಿಸುವ ಮೂಲಕ ನೀವು ಆತನನ್ನು ಉಳಿಸಿಕೊಂಡಾಗ, ನೀವು ಸಾಯುವ ವರೆಗೆ ಆತನ ಶಕ್ತಿಯಿಂದ ಆತನ ಜೀವ-ಶಕ್ತಿಯನ್ನು ನಿಮ್ಮೊಳಗೆ ಹೊಂದಿರಲು ನಿಮ್ಮಿಂದ ಸಾಧ್ಯವಾಗುತ್ತದೆ. ಆದಾಗ್ಯೂ, ಇದಕ್ಕೆ ಸಂಪೂರ್ಣ ಶ್ರದ್ಧೆ ಇರಬೇಕು. ಸೈತಾನನು ನಿಮ್ಮೊಂದಿಗೆ ಆಟವಾಡುತ್ತಿಲ್ಲ! ನೀವು ಆತನೊಂದಿಗೆ ನರಕ ಮತ್ತು ಬೆಂಕಿಯ ಕೆರೆಯಲ್ಲಿ ಇರಬೇಕೆಂದು ಅವನು ಬಯಸುತ್ತಾನೆ.

ದೇವರು ಕೂಡ ಆಟವಾಡುತ್ತಿಲ್ಲ. ಆತ ಕಪಾಲದಲ್ಲಿ ನಮಗಾಗಿ ಶಿಲುಬೆಯ ಮೇಲೆ ಸಾವನ್ನಪ್ಪಿದರು, ನಂತರ, ತಾನು ದೇವರು ಮತ್ತು ನಮ್ಮನ್ನು ರಕ್ಷಿಸುವ ಮತ್ತು ಕೊನೆಯ ದಿನದಂದು ನಮ್ಮನ್ನು ಪುನರುತ್ಥಾನಗೊಳಿಸುವ[16] ಶಕ್ತಿ ತನ್ನಲ್ಲಿದೆ ಎಂದು ನಮಗೆ ಸಾಬೀತುಪಡಿಸಲು ಸಾವಿನಿಂದ ಎದ್ದರು ಮತ್ತು ಸ್ವರ್ಗಕ್ಕೆ ಮೇಲೇರಿದರು.

ಪ್ರೀತಿ ಎಂದರೆ ಕಾಮ ಅಲ್ಲ. ಪ್ರೀತಿ ಎಂದರೆ ದೇವರ ಆಜ್ಞೆಗಳನ್ನು ಪಾಲಿಸುವುದು (1 ಯೋಹಾನ 5:3).[17] ನೀವು ಮನಸ್ಸು ಮಾಡಿದರೆ, ನೀವು ಬದುಕುವಿರಿ. ಆತನನ್ನು ಬಲ್ಲೆನೆಂದು (ಆತನನ್ನು ಪ್ರೀತಿಸುತ್ತೇನೆ) ಹೇಳಿ ಆತನ ಆಜ್ಞೆಗಳನ್ನು ಪಾಲಿಸದೇ ನಡೆಯುವವನು ಸುಳ್ಳುಗಾರನಾಗಿದ್ದಾನೆ; ಸತ್ಯವೆಂಬುದು ಅವನಲ್ಲಿಲ್ಲ (1 ಯೋಹಾನ 2:4). "ಇದಲ್ಲದೆ ದೇವರ ಜ್ಞಾನವು ಅವರಿಗೆ ಇಷ್ಟವಿಲ್ಲದ್ದರಿಂದ ಅಲ್ಲದ ಕೃತ್ಯಗಳನ್ನು ನಡೆಸುವವರಾಗುವಂತೆ ದೇವರು ಅವರನ್ನು [ಅವರ] ಅನಿಷ್ಟಭಾವಕ್ಕೆ-[ಗಳಿಗೆ] ಒಪ್ಪಿಸಿದನು" (ಮತ್ತು ಅವರ ಅನಿಷ್ಟ ಜೀವನಶೈಲಿಗೆ), ಸೈತಾನನು ಅವರು ಮಾಡಬೇಕೆಂದು ಬಯಸುವ ಕೆಲಸಗಳನ್ನು ಮಾಡಲು ಅನಿಷ್ಟಭಾವಕ್ಕೆ ಒಪ್ಪಿಸಿದನು, ಮತ್ತು ಅವರಲ್ಲಿನ ಅವನ ದುಷ್ಟ ಆತ್ಮವು ಹಾಗೆ ಮಾಡುವುದನ್ನು ಅವರು ಪ್ರೀತಿಸುವಂತೆ ಕೂಡ ಮಾಡುತ್ತದೆ (ರೋಮಾಪುರದವರಿಗೆ 1:28-32).

ಮೂರ್ಖರು ಅರಸರಾಗಿ ಜಗತ್ತನ್ನು ಚಿನ್ನ, ವಿಕೃತಿ, ರಾಜಕೀಯ, ಮತ್ತು ಇತರ ವಿಷಯಗಳೊಂದಿಗೆ ಆಳಲಿ, ಆದರೆ ನನ್ನ ಹೃದಯವು

*(ಪುಟ 8ರಲ್ಲಿ ಮುಂದುವರಿದಿದೆ)*

---

**14** ಯೆಶಾಯ 66:24, ದಾನಿಯೇಲನು 12:1-3, ಮತ್ತಾಯ 25:31-46, ಮಾರ್ಕ 9:42-48, ಯೋಹಾನ 5:26-29, ರೋಮಾಪುರದವರಿಗೆ 2:1-16, ಪ್ರಕಟನೆ 14:9-11 **15** ಧರ್ಮೋಪದೇಶಕಾಂಡ 30:14-20, ಯೆಹೋಶುವನು 24:14-15, ಯೆಹೆಜ್ಕೇಲನು 18:19-32, 33:11, ಯೋವೇಲನು 3:14, ಮತ್ತಾಯ 16:24-27 **16** ಮಾರ್ಕ ಅಧ್ಯಾಯ 16, ಯೋಹಾನ 11:25-26, ಅಪೋಸ್ತಲರ ಕೃತ್ಯಗಳು 2:29-33, 4:10-12, 1 ಕೊರಿಂಥದವರಿಗೆ 15:3-22, 1 ಪೇತ್ರನು 1:3-5

**17** ವಿಮೋಚನಕಾಂಡ 20:6, ಧರ್ಮೋಪದೇಶಕಾಂಡ 7:9, 11:1, 13-15, 30:16, ಯೆಹೋಶುವನು 22:5, ಯೋಹಾನ 14:15, 21, 15:10, 2 ಯೋಹಾನ 6

## ಆರ್ಕನ್ಸಾಸ್

ಪ್ರೀತಿಯ ಪ್ಯಾಸ್ಟರ್ ಟೋನಿ,

ಇಂದು ನಾನು ಪುನಃ-ಹುಟ್ಟಿದ ಕ್ರೈಸ್ತಮತೀಯನಾದ ಒಬ್ಬ ಗೆಳೆಯನೊಂದಿಗೆ ಇದ್ದೆನು. ಅವನು ಒಂದು ಅಂತ್ಯಕ್ರಿಯೆಯಲ್ಲಿದ್ದನು. ಸತ್ತವರು ಒಬ್ಬ ಸುವಾರ್ತಾ ಪ್ರಚಾರಕರಾಗಿದ್ದರು ಮತ್ತು ಅವರ ಅಂತ್ಯಕ್ರಿಯೆಯಲ್ಲಿ ಬಹಳ ಜನ ಬಂದಿದ್ದರು. ಅವರ ಸಾವಿಗೆ ಮುನ್ನ ಅವರ ಬಹಿರಂಗ ಘೋಷಣೆ ಏನಾಗಿತ್ತು ಎಂದರೆ, ಅವರು ಹೋದಲ್ಲೆಲ್ಲ, ಅದು ವಾಲ್ಮಾರ್ಟ್ ಆಗಿರಲಿ ಅಥವಾ ಔಷಧದ ಅಂಗಡಿ ಆಗಿರಲಿ ಅಥವಾ ಬೀದಿಯೇ ಆಗಿರಲಿ, ಅವರು ಯಾವಾಗಲೂ ಜನರಿಗೆ, "ನಿಮಗೆ ಯೇಸು ಕ್ರಿಸ್ತರು ನಿಮ್ಮ ವೈಯಕ್ತಿಕ ರಕ್ಷಕರಾಗಿ ಪರಿಚಯವಿದ್ದಾರೆಯೆ? ನೀವು ದೇವರೊಂದಿಗೆ ಸರಿಯಾಗಿದ್ದೀರಾ?" ಎಂದು ಕೇಳುತ್ತಿದ್ದರು ಮತ್ತು ಅವರು ಹೋದಲ್ಲೆಲ್ಲ ಹೀಗೆ ಮಾಡುತ್ತಿದ್ದರು, ಎಷ್ಟರ ಮಟ್ಟಿಗೆ ಎಂದರೆ ಅವರು ಹೀಗೇಕೆ ಮಾಡುತ್ತಾರೆ ಎಂದು ಕೆಲವರು ಆಲೋಚಿಸುತ್ತಿದ್ದರು.

ಸರಿ, ಅಂತ್ಯಕ್ರಿಯೆಯಲ್ಲಿ, ಅವರ ಮಗಳು ಎದ್ದುನಿಂತು, "ನನ್ನ ತಂದೆಯ ಬಗ್ಗೆ ಒಂದು ಕಥೆಯನ್ನು ನಿಮಗೆ ಹೇಳಲು ಬಯಸುತ್ತೇನೆ. ನಾನು ಚಿಕ್ಕವಳಾಗಿದ್ದಾಗ, ಸುಮಾರು ೧೩ ವರ್ಷದವಳಾಗಿದ್ದಾಗ, ನಾನು ಆಗಾಗ್ಗೆ ಅವರೊಂದಿಗೆ ಹೋಗುತ್ತಿದ್ದೆ, ಮತ್ತು ನಾವು ಹೋದಲ್ಲೆಲ್ಲ, ಅವರು ಯೇಸುವಿನೊಂದಿಗೆ ಸರಿಯಾಗಿದ್ದಾರೆ ಎಂದು ಯಾರನ್ನಾದರೂ ಕೇಳಲು, ಅಥವಾ 'ನಿಮಗೆ ಯೇಸು ಕ್ರಿಸ್ತರು ನಿಮ್ಮ ವೈಯಕ್ತಿಕ ರಕ್ಷಕರಾಗಿ ಪರಿಚಯವಿದ್ದಾರಾ?' ಎಂದು ಹೇಳಲು ನಿಲ್ಲುತ್ತಿದ್ದರು. ಅವರು ಅತಿಯಾಗಿ ಆಡುತ್ತಿದ್ದಾರೆ ಎಂದು ನನಗೆ ಕೆಲವೊಮ್ಮೆ ಅನ್ನಿಸುತ್ತಿತ್ತು. ಅವರು ಎಲ್ಲರಿಗೂ ಹೇಳುತ್ತಿದ್ದರು, ಮತ್ತು ಅದು ಎಡೆಬಿಡದೆ ನಡೆಯುತ್ತಿತ್ತು.

"ಒಂದು ದಿನ ನಾವು ಕಾರಿನಲ್ಲಿ ಕುಳಿತುಕೊಂಡೆವು ಮತ್ತು ನಾನು, "ಅಪ್ಪ, ನೀವು ಯೇಸು ಬಗ್ಗೆ ಪ್ರತಿಯೊಬ್ಬರಿಗೆ ಏಕೆ ಹೇಳಬೇಕು?' ಎಂದು ಕೇಳಿದೆ. ನನ್ನ ತಂದೆ, 'ಮಗಳೇ, ನಾನು ನಿನಗೆ ಒಂದು ಕಥೆ ಹೇಳುತ್ತೇನೆ. ನಾನು 17 ವರ್ಷದವನಾಗಿದ್ದಾಗ, ನನಗೆ ಕನಸಿನಂಥ ಒಂದು ದರ್ಶನವಾಯಿತು, ಮತ್ತು ಅದರಲ್ಲಿ ನಾನು ಸತ್ತು ಸ್ವರ್ಗಕ್ಕೆ ಹೋದೆನು. ಅದು ಅತ್ಯಂತ ಸುಂದರ ಸ್ಥಳವಾಗಿತ್ತು. ನಂತರ ಅವರು ನನ್ನನ್ನು ಸ್ವರ್ಗದ ಅಂಚಿಗೆ ಕರೆದುಕೊಂಡು ಹೋದರು, ಮತ್ತು ನಾನು ಪಾತಾಳವನ್ನು ನೋಡಿದೆನು. ನನ್ನತ್ತ ಎತ್ತಿದ ಕೈಗಳನ್ನು ನಾನು ನೋಡಬಲ್ಲೆನಾದೆನು ಮತ್ತು ಅವು, "ನೀನು ನಮಗೆ ಏಕೆ ಹೇಳಲಿಲ್ಲ! ನೀನು ನಮಗೆ ಏಕೆ ಹೇಳಲಿಲ್ಲ! ನೀನು ನಮಗೆ ಏಕೆ ಹೇಳಲಿಲ್ಲ!" ಎಂದು ಕೂಗುತ್ತಿದ್ದವು. ಮತ್ತು ಅವರು ನನಗೆ ತಿಳಿದ ಜನರಾಗಿದ್ದರು. ಆ ಕನಸು ಮುಗಿಯಿತು ಮತ್ತು ನಾನು ಭೂಮಿಗೆ ಹಿಂದಿರುಗಿದೆ. ಆದುದರಿಂದಲೆ ನಾನು ಎಲ್ಲರಿಗೆ ಹೇಳುತ್ತೇನೆ.'"

ನನ್ನ ಗೆಳೆಯನಿಗೆ ಅದು, ಪ್ಯಾಸ್ಟರ್ ಅಲಾಮೊ ಅವರ ಸಾಹಿತ್ಯದೊಂದಿಗೆ ನಮ್ಮ ಬಗ್ಗೆ ಬಹಳ ಜ್ಞಾಪಿಸಿತು ಎಂದು ಅವನು ಹೇಳಿದನು, ಏಕೆಂದರೆ ನಾವು ಹೋದಲ್ಲೆಲ್ಲ, ನಾವು ಯಾವಾಗಲೂ ಸಾಹಿತ್ಯವನ್ನು ಹಂಚುತ್ತಿರುತ್ತೇವೆ. ಪ್ಯಾಸ್ಟರ್ ಟೋನಿ ಅವರು ಅನೇಕ ವರ್ಷಗಳಿಂದ ಜನರಿಗೆ ಎಚ್ಚರಿಕೆ ನೀಡುತ್ತಿದ್ದಾರೆ ಎಂದು ಅವನು ಹೇಳಿದನು.

ಪ್ರಭುವನ್ನು ಸ್ತುತಿಸೋಣ,

ಸಹೋದರ ಟಾಮಿ

## ಕೀನ್ಯಾ

ನಮಸ್ಕಾರ ಪ್ಯಾಸ್ಟರ್ ಟೋನಿ ಅಲಾಮೊ,

ನಿಮ್ಮ ಕಾಳಜಿಗಾಗಿ ನಾನು ತಲೆಬಾಗುತ್ತೇನೆ. "ಟೋನಿ ಅವರ ವೆಬ್ ಸೈಟ್ ನಲ್ಲಿ ನಾನು ಯೇಸುವನ್ನು ಕಂಡೆನು" ಎಂಬ ನಿಮ್ಮ ಸುದ್ದಿಪತ್ರಿಕೆಯಿಂದ ನಾನು ಬಹಳ ಅನುಗ್ರಹಿತಳಾದೆನು. ನಾನು ಆ ಲೇಖನವನ್ನು ಓದಿ ಸುದ್ದಿಪತ್ರಿಕೆಯಲ್ಲಿದ್ದ ಕ್ಷಮೆಗಾಗಿ ಪ್ರಾರ್ಥನೆಯನ್ನು ಹೇಳಿದೆನು. ನಾನು ಮನಸಾರೆ ನನ್ನ ಪಾಪಗಳಿಗೆ ಪಶ್ಚಾತ್ತಾಪಪಟ್ಟೆನು, ನಿಜ ಹೇಳಬೇಕಾದರೆ, ದೇವರ ನಿಂದನೆಯಲ್ಲಿ ನಾನು ಜಗತ್ತಿನಲ್ಲಿ ವ್ಯರ್ಥಮಾಡಿದ ಸಮಯಕ್ಕಾಗಿ ವಿಷಾದಿಸುತ್ತ ಕಣ್ಣೀರಿಟ್ಟೆನು! ಪಾಪದ ಹೊರೆ ನನ್ನನ್ನು ಬಿಟ್ಟುಹೋದ ಅನುಭವವಾಯಿತು ನನಗೆ. ನಿಜವಾಗಿ ನನಗೆ ಹಗುರ ಮತ್ತು ಮುಕ್ತವಾದಂತೆ ಅನ್ನಿಸುತ್ತಿದೆ. ಎಂತಹ ಆನಂದದಿಂದ ವಂಚಿತಳಾಗಿದ್ದೆ, ಪಾಪಗಳು ಕ್ಷಮಿಸಲ್ಪಡುವ ಆನಂದ, ಕ್ರಿಸ್ತರಲ್ಲಿ ಬದುಕುವ ಆನಂದ. ನನ್ನ ಆತ್ಮವನ್ನು ರಕ್ಷಿಸಿದುದಕ್ಕಾಗಿ ನಾನು ಪ್ರಭುವಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಮತ್ತು ಈ ಆಧ್ಯಾತ್ಮಿಕ ಪಯಣದಲ್ಲಿ ಪವಿತ್ರಾತ್ಮವು ನನಗೆ ಮಾರ್ಗದರ್ಶನ ನೀಡಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಈಗ ನಾನು ಈ ಆಧ್ಯಾತ್ಮಿಕ ಪಯಣದಲ್ಲಿ ಪ್ರಾರಂಭಿಕ ಪಯಣಿಗ. ನಾನು ಹೇಗೆ ಮುಂದುವರಿಯಬೇಕು ಮತ್ತು ಸೈತಾನನನ್ನು ಮತ್ತು ಅವನ ಸುಳ್ಳುಗಳನ್ನು ನಾನು ಹೇಗೆ ಅವಮಾನಿಸಬಹುದು ಎಂಬ ಬಗ್ಗೆ ದಯವಿಟ್ಟು ನನಗೆ ಮಾರ್ಗದರ್ಶನ ನೀಡಿ. ಪುನಃ ನಾನು ನಿಮ್ಮ ಮಿನಿಸ್ಟ್ರಿಗಳಿಗೆ ಕೃತಜ್ಞಳಾಗಿದ್ದೇನೆ ಏಕೆಂದರೆ ಧರ್ಮಕ್ಕೆ ಸಂಬಂಧಪಟ್ಟಂತೆ ಅವರು ಎಲ್ಲವನ್ನೂ ಒದಗಿಸುತ್ತಾರೆ. ದೇವರು ನಿಮ್ಮನ್ನು ಮತ್ತು ನಿಮ್ಮ ಮಿನಿಸ್ಟ್ರಿಗಳನ್ನು ಸಮೃದ್ಧವಾಗಿ ಅನುಗ್ರಹಿಸಲಿ.

ಸಾರ ಟೆರಿ — ಬಂಗೋಮ, ಕೀನ್ಯಾ

# ನಮ್ಮ ಭಾಷಾಂತರ ವಿಭಾಗದಿಂದ

ನಾವು ಇಲೊಕಾನೊ ಅನುವಾದಗಳ (ಉತ್ತರ ಫಿಲಿಪೀನ್ಸ್ ನಲ್ಲಿ ಮಾತನಾಡುವ ಭಾಷೆ) ಮೇಲೆ ಕೆಲಸ ಮಾಡುತ್ತಿದ್ದೇವೆ, ಮತ್ತು ಅನುವಾದಕರಲ್ಲಿ ಒಬ್ಬನು, ಪೆಂಟಕೋಸ್ಟಲ್ ಮತದಲ್ಲಿ ಬೆಳೆಸಲ್ಪಟ್ಟು, ಥಿಯಲಾಜಿಕಲ್ ಸೆಮಿನರಿಯಿಂದ ಪದವಿ ಪಡೆದು, ಮಕ್ಕಳಿಗಾಗಿ ಬೈಬಲ್ ಶಾಲೆಯೊಂದರಲ್ಲಿ ಹೇಳಿಕೊಡುತ್ತಿದ್ದಾನೆ. ಅವರ ಚರ್ಚ್ ಉತ್ತರ ಫಿಲಿಪೀನ್ಸ್ ಆದ್ಯಂತ ಹರಡಿರುವ 50 ಇತರ ಚರ್ಚ್ ಗಳನ್ನು ಹೊಂದಿದ್ದು, ಪ್ರತಿಯೊಂದು ಚರ್ಚ್ ತನ್ನದೇ ಆದ ಪ್ಯಾಸ್ಟರ್‌ಅನ್ನು ಹೊಂದಿದೆ. ಅವನು ಈಗ ಬೈಬಲ್ ನ ಪ್ರತಿಯೊಂದು ಪುಸ್ತಕಕ್ಕೆ ಬೈಬಲ್ ಸಹಾಯಗಳನ್ನು ಅನುವಾದ ಮಾಡುತ್ತಾ ಅಮೇರಿಕನ್ ಬೈಬಲ್ ಸೊಸೈಟಿಯೊಂದಿಗೆ ಕೆಲಸ ಮಾಡುತ್ತಿದ್ದಾನೆ.

ತಾನು "ಪೋಪ್ ಅವರ ರಹಸ್ಯಗಳು", "ಫ್ಯೂಜಿಟಿವ್ ಪೋಪ್", "ಸೈತಾನನು ಒಂದು ಚರ್ಚ್ ಮತ್ತು ಸರ್ಕಾರ ಹೊಂದುವನು ಎಂದು ಯೇಸು ಕ್ರಿಸ್ತರು ಹೇಳಿದರು", ಮತ್ತು "ಜಾರಸ್ತ್ರೀಯರ ರಾಣಿ" ಗಳ ಮೇಲೆ ಕೃತಿಸ್ವಾಮ್ಯಗಳನ್ನು ನೋಡಿದಾಗ, ಅವು 80 ಮತ್ತು 90ರ ದಶಕಗಳದ್ದಾಗಿದ್ದವು ಎಂದು ನೋಡಿದೆನು ಎಂದು ನಮಗೆ ಹೇಳಿದನು. ಇಷ್ಟು ಹಿಂದೆಯೇ ಪ್ಯಾಸ್ಟರ್ ಅಲಾಮೊ ಈ ಸತ್ಯಾಂಶಗಳನ್ನು ಬರೆದದ್ದು ಆಶ್ಚರ್ಯಕರ, ಮತ್ತು ಆ ಸಮಯದಲ್ಲಿ ಅವು ಸತ್ಯವೆಂದು ಯಾರಿಗೂ ತೋರಲಿಲ್ಲ, ಆದರೆ ಈಗ ನೀವು ಎಷ್ಟು ಸುಲಭವಾಗಿ ನೋಡಬಹುದು ಎಂದು ಹೇಳಿದನು. ಪ್ಯಾಸ್ಟರ್ ಅಲಾಮೊ ಈ ವಿಷಯಗಳನ್ನು ಎಲ್ಲರಿಗಿಂತ ಮೊದಲೇ ತಿಳಿದುಕೊಂಡಿದ್ದರು ಮತ್ತು ಎಲ್ಲರಿಗೆ ಎಚ್ಚರಿಕೆ ನೀಡುವ ಸಲುವಾಗಿ ಅದನ್ನು ಪ್ರಕಾಶನ ಮಾಡಿದರು.

ಫಿಲಿಪೀನಿಸ್ ಎಷ್ಟು ಕ್ಯಾಥೊಲಿಕ್ ಎಂದರೆ ನೀವು ಪ್ರಭುವಿನ ಬಗ್ಗೆ ಯಾರೊಂದಿಗೂ ಮಾತನಾಡಲು ಸಾಧ್ಯವಿಲ್ಲ ಎಂದು ಅವನು ಹೇಳಿದನು, ಆದರೆ ಸಾಹಿತ್ಯವನ್ನು ಕೋರುತ್ತಾ ಜನರು ಬರೆದ ಪತ್ರಗಳನ್ನು ಓದಿದ ನಂತರ ಮತ್ತು ಜನರು ಸಾಕ್ಷಿಗಳಾದ ನಂತರ, ಅವನು ಭಾಷಾಂತರಿಸಲು ನೆರವು ನೀಡಿರುವ ಪ್ರತಿಯೊಂದು ಸಾಹಿತ್ಯದ 100 ಪ್ರತಿಗಳನ್ನು ಹಂಚುವುದಕ್ಕಾಗಿ ಕೋರಿಕೆ ಸಲ್ಲಿಸಿದನು. ಅವನು ಮೆಸ್ಸೈಅ ಪುಸ್ತಕಗಳನ್ನು ಕೂಡ ಆರ್ಡರ್ ಮಾಡಿದನು. "ನಾನು ಬೈಬಲ್ ಸೊಸೈಟಿಗಾಗಿ ಅನುವಾದ ಮಾಡುತ್ತೇನೆ, ಆದರೆ ಇದು ಆತ್ಮವನ್ನು ಗೆಲ್ಲುವಂಥದ್ದಾಗಿದೆ" ಎಂದು ಅವನು ಹೇಳಿದನು. ಇದರ ಒಂದು ಭಾಗವಾಗಿರಲು ತನಗೆ ಬಹಳ ಹೆಮ್ಮೆಯಾಗಿದೆ, ಮತ್ತು ಸಾಹಿತ್ಯವನ್ನು ತನ್ನ ತರಗತಿಗಳಲ್ಲಿ ಬಳಸುತ್ತಿರುವುದಾಗಿ ಅವನು ಹೇಳಿದನು. "ನಾನು ಸೆಮಿನರಿಗೆ ಹೋಗಿದ್ದೇನೆ ಮತ್ತು ಅದು ನನ್ನೊಳಗಿದೆ, ಆದರೆ ಈ ಸಾಹಿತ್ಯ ವಾಸ್ತವಿಕವಾದುದು ಮತ್ತು ಇದು ಗಂಭೀರವಾಗಿದೆ. ಇಲ್ಲಿ ನಡೆಯುತ್ತಿರುವುದರ ಗಾಂಭೀರ್ಯತೆಯನ್ನು ನಾನು ನನ್ನ ಸ್ವಂತ ಬದುಕಿನಲ್ಲಿ ನೋಡಬಹುದು. ಈ ಸಾಹಿತ್ಯವೇ ಈಗ ನಡೆಯುತ್ತಿರುವುದು ಎಂದು ನಾನು ನೋಡಬಲ್ಲೆ" ಎಂದು ಅವನು ಹೇಳಿದನು.

ಸ್ವಾಹೀಲಿ ಅನುವಾದಕರು ಮೂರು ಮಕ್ಕಳ ತಾಯಿ ಮತ್ತು ಅವರ ಗಂಡ ಒಬ್ಬ ಪ್ಯಾಸ್ಟರ್ ಆಗಿದ್ದಾರೆ. ಪೋಪ್ ಅವರನ್ನು ಕುರಿತಾದ ಸಾಹಿತ್ಯದ ವಿವಿಧ ತುಣುಕುಗಳ ಮೇಲೆ ಕೆಲಸ ಮಾಡುವಾಗ, ಪೋಪ್ ವಿರುದ್ಧ ಮತ್ತು ಕ್ಯಾಥೊಲಿಕ್ ಚರ್ಚ್ ವಿರುದ್ಧ ಕೆಲವು ಆಪಾದನೆಗಳು ಅತಿಲಂಬಿತ ಮತ್ತು ಉತ್ಪ್ರೇಕ್ಷೆಗಳಾಗಿವೆ ಎಂದು ತನಗೆ ಅನಿಸಿತು ಎಂದು ತಾನು ಪ್ರಾಮಾಣಿಕವಾಗಿ ಹೇಳಬೇಕು ಎಂದು ಅವರು ಹೇಳಿದರು. ಕ್ಯಾಥೊಲಿಕ್ ಚರ್ಚಿನ ಸಿದ್ಧಾಂತ ಒಂದು ಸುಳ್ಳು ಸಿದ್ಧಾಂತ, ಆದರೆ ಜನರು ಅದರಿಂದ ವಿಮುಖರಾಗುವಂತೆ ಮಾಡುವುದಾದರೆ ಸಂದೇಶಗಳ ಸತ್ಯ ಪ್ರಮುಖವಲ್ಲ ಎಂದು ತನಗೆ ತಿಳಿದಿತ್ತು ಎಂದು ಅವರು ಹೇಳಿದರು. ಆದರೂ, ಅವರು ಅದನ್ನು ನಿಜವಾಗಿಯೂ ನಂಬಲಿಲ್ಲ.

ಒಂದು ದಿನ ರಾತ್ರಿ ತನ್ನ ಗಂಡ ಆ ಸಾಹಿತ್ಯವನ್ನು ಓದುತ್ತ, "ನೀನು ಇವುಗಳನ್ನು ತರಿಸಿಕೊಂಡದ್ದು ಏಕೆ?" ಎಂದು ತನ್ನನ್ನು ಕೇಳಿದರು ಎಂದು ಅವರು ಹೇಳಿದರು. "ನಾನು ಮಕ್ಕಳನ್ನು ಪಾರ್ಕಿಗೆ ಕರೆದುಕೊಂಡು ಹೋದಾಗ ಅವುಗಳನ್ನು ಜನರಿಗೆ ಹಂಚಬಹುದಲ್ಲ ಎಂದು ತರಿಸಿಕೊಂಡೆ" ಎಂದು ಅವರು ಉತ್ತರಿಸಿದರು. ಆತ ಕೂಡಲೆ, "ಖಂಡಿತ ಇಲ್ಲ! ನೀನು ಇದನ್ನು ನಿನ್ನ ಬಳಿ ಇಟ್ಟುಕೊಳ್ಳುವೆ! ನೀನು ಇದನ್ನು ಸುಮ್ಮನೆ ಹಾಗೇ ಹಂಚಲು ಸಾಧ್ಯವಿಲ್ಲ. ಇವು ಸತ್ಯ! ನಾವು ಇವುಗಳನ್ನು ಅಧ್ಯಯನ ಮಾಡಬೇಕು" ಎಂದು ಹೇಳಿದರು. "ನಾನು ಬೈಬಲ್ ಕಾಲೇಜಿಗೆ ಹೋಗಿದ್ದೆ ಮತ್ತು ಈ ವಿಷಯಗಳನ್ನು ಬೋಧಿಸಲಾಗುತ್ತದೆ ಮತ್ತು ಇವು ದಾಖಲಾಗಿವೆ ಮತ್ತು ಇಲ್ಲಿ ಬರೆಯಲಾಗಿರುವ ಎಲ್ಲವೂ ಸತ್ಯ" ಎಂದು ಆತ ಹೇಳಿದರು.

ಅವರು ಆತನನ್ನು ನೋಡಿ ತನ್ನ ಮನಸ್ಸಿನಲ್ಲೇ, "ನೀವು ಹಲವಾರು ವರ್ಷಗಳ ಹಿಂದೆ ಬೈಬಲ್ ಕಾಲೇಜಿಗೆ ಹೋಗಿದ್ದಿರಿ ಮತ್ತು ಈ ವಿಷಯಗಳು ನಿಜವೆಂದು ನಿಮಗೆ ತಿಳಿದಿತ್ತು. ಜಗತ್ತಿಗೆ ಎಚ್ಚರಿಕೆ ನೀಡಲು ನೀವು ಅಥವಾ ಆ ಕಾಲೇಜು ಏನು ಮಾಡಿತು? ನೀವಾಗಲಿ ಬೇರೆ ಯಾರೇ ಆಗಲಿ ಅದರ ಬಗ್ಗೆ ಏನೂ ಮಾಡಲಿಲ್ಲ. ಈ ವ್ಯಕ್ತಿಗೆ (ಪ್ಯಾಸ್ಟರ್ ಅಲಾಮೊ) ಮಾತನಾಡಲು ದೇವರು ವಿಶೇಷವಾಗಿ ಕರೆ ನೀಡಿದ್ದಾರೆ. ಏಕೆಂದರೆ ನೀವಾಗಲಿ ಬೇರೆ ಯಾರೇ ಆಗಲಿ ಮಾತನಾಡಿಲ್ಲ ಮತ್ತು ಮಾತನಾಡುವುದೂ ಇಲ್ಲ" ಎಂದು ಹೇಳಿಕೊಂಡರು. "ಈಗ ನಾನು ಅದನ್ನು ನಂಬುತ್ತೇನೆ, ಮತ್ತು ನಿಜ ಹೇಳದೆ ಅದನ್ನು ಮುಚ್ಚಿಟ್ಟವರ ಬಗ್ಗೆ ನನಗೆ ಅಸಹ್ಯವೆನಿಸುತ್ತದೆ" ಎಂದು ಅವರು ಹೇಳಿದರು.

ಸ್ವೀಡಿಷ್ ಅನುವಾದಕರು ಪ್ರೊಟೆಸ್ಟೆಂಟ್ ಆಗಿ ಬೆಳೆದರು, ಆದರೆ ಹಲವಾರು ವರ್ಷಗಳಿಂದ ಚರ್ಚ್, ಧರ್ಮ, ಅಥವಾ ದೇವರೊಂದಿಗೆ ಯಾವುದೇ ಸಂಬಂಧವಿಟ್ಟುಕೊಂಡಿಲ್ಲ. ಆತ ಒಬ್ಬ ರಾಜಕೀಯ ಚಳುವಳಿಗಾರನಾಗಿದ್ದು, ಸ್ವೀಡಿಷ್ ಸರ್ಕಾರದಲ್ಲಿ ವಿವಿಧ ತಪ್ಪುಗಳ ವಿರುದ್ಧ ಹೋರಾಡುತ್ತಿದ್ದಾರೆ. ಆತ ರಾಜಕೀಯ ಬ್ಲಾಗ್ ಗಳನ್ನು ಬರೆಯುತ್ತಾರೆ ಮತ್ತು ಸಮಾವೇಶಗಳನ್ನು ನಡೆಸುತ್ತಾರೆ ಮತ್ತು ಜೊತೆಗೆ ಸಾಹಿತ್ಯದ ಅನುವಾದಗಳನ್ನು ಮಾಡುತ್ತಾರೆ. ಆತ ತನ್ನ ನಂಬಿಕೆಗಳ ಬಗ್ಗೆ ಬಹಳ ಖಚಿತವಾಗಿದ್ದಾರೆ, ಆದರೆ ಮೆಸ್ಸೈಅ ಪುಸ್ತಕದಿಂದ ಒಂದು ಭಾಗವನ್ನು ಓದಿದಾಗ, ಆತ "ಜನಸಮೂಹವು, 'ಅವನನ್ನು ಶಿಲುಬೆಗೆ ಹಾಕಿ, ಅವನನ್ನು ಶಿಲುಬೆಗೆ ಹಾಕಿ' ಎಂದು ಕೂಗಿತು" ಎಂಬುದನ್ನು ಓದಿದಾಗ, ಆತ ಅಳಲು ಪ್ರಾರಂಭಿಸಿದರು.

"ನಾನು ವಿವಿಧ ಒಳಸಂಚಿನ ಸಿದ್ಧಾಂತಗಳನ್ನು ಅಧ್ಯಯನ ಮಾಡಿದ್ದೇನೆ, ಆದರೆ ಯಾರೂ ಎಲ್ಲವನ್ನು ಈ ರೀತಿಯಲ್ಲಿ ವ್ಯಾಟಿಕನ್ ಗೆ ಸಂಬಂಧಿಸುವುದನ್ನು ನಾನು ಎಂದೂ ನೋಡಿಲ್ಲ. ಇದು ಅದ್ಭುತವಾಗಿದೆ. ಇದನ್ನು ಮಾಡುವುದು ನನಗೆ ನಿಜವಾಗಿಯೂ ಇಷ್ಟವಾಗಿದೆ. ನೀವೆಲ್ಲರೂ ನನ್ನ ಮೇಲೆ ಪ್ರಭಾವ ಬೀರಲು ಪ್ರಾರಂಭಿಸಿದ್ದೀರಿ. ನಾನು ನನ್ನ ಬ್ಲಾಗ್ ಬರೆಯುತ್ತಿದ್ದೆ ಮತ್ತು ನಾನು ಪ್ರಕಟನೆಯನ್ನು ಉಲ್ಲೇಖಿಸುತ್ತಿದ್ದುದನ್ನು ಕಂಡೆನು."

ಸರ್ಬಿಯನ್ ಅನುವಾದಕರು ಚರಿತ್ರೆಯಲ್ಲಿ ಸ್ನಾತಕ ಪದವಿ ಪಡೆದಿದ್ದಾರೆ ಮತ್ತು ಇದರ ಭಾಗವಾಗಿರುವುದು ಬಹಳ ರೋಮಾಂಚನಕಾರಿಯಾಗಿದೆ ಎಂದು ಹೇಳಿದರು. ಸರ್ಬಿಯ, ಬಹಳಷ್ಟು ಕೊಲೆಗಳೊಂದಿಗೆ ಧಾರ್ಮಿಕ ಹಿಂಸೆಯ ಸಮಸ್ಯೆಯುಳ್ಳ ಚರಿತ್ರೆಯನ್ನು ಹೊಂದಿದೆ, ಮತ್ತು ಪ್ಯಾಸ್ಟರ್ ಅಲಾಮೊ ಈ ಧಾರ್ಮಿಕ ಹಿಂಸೆಯನ್ನು ಅನುಭವಿಸುತ್ತಿದ್ದರೂ ಇನ್ನೂ ಮಾತನಾಡುತ್ತಿದ್ದಾರೆ. ಇದು ರೋಮಾಂಚನಕಾರಿಯಾಗಿದೆ ಎಂದು ಅವರು ಹೇಳಿದರು.

## ನೈಜೀರಿಯ

ಪ್ರೀತಿಯ ಅಲಾಮೊ ಮಿನಿಸ್ಟ್ರಿಯವರೇ,

ನಮ್ಮ ಪವಿತ್ರ ಪ್ರಭು ಮತ್ತು ರಕ್ಷಕನಾದ ಯೇಸು ಕ್ರಿಸ್ತರ ಹೆಸರಿನಲ್ಲಿ ನಿಮಗೆ ನಮಸ್ಕಾರಗಳು. ಟೋನಿ ಅಲಾಮೊ ಕ್ರೈಸ್ತಮತೀಯ ಮಿನಿಸ್ಟ್ರಿಗಳ ವಿಶ್ವ ಸುದ್ದಿಪತ್ರಿಕೆಯು ನೈಜೀರಿಯದಲ್ಲಿರುವ ಇಗೊಡಾನ್ ಲೀಸ ಟೌನ್ ನ ಬದುಕುಗಳನ್ನು ಬಹಳವಾಗಿ ಬದಲಾಯಿಸುತ್ತಿದೆ. ಈ ಸುದ್ದಿಪತ್ರಿಕೆಯ ಮೇಲಿನ ಪವಿತ್ರತೆಯು ಬಹಳ ಶ್ರೇಷ್ಠವಾಗಿದೆ. ದೇವರ ವಿಷಯಗಳ ಗ್ರಹಿಕೆ ಒಂದು ಹೊಸ ಮಟ್ಟಿಗೆ ನನ್ನನ್ನು ಏರಿಸುವ ಮೂಲಕ ಅದು ನನ್ನ ಆಧ್ಯಾತ್ಮಿಕ ಬದುಕಿಗೆ ನೆರವಾಗಿದೆ. "ಭೂಕಂಪ" ಎಂಬ ಹೆಸರಿನ ನಿಮ್ಮ ಸುದ್ದಿಪತ್ರಿಕೆಯನ್ನು ನನಗೆ ನೀಡಿದವರು ನಿಮ್ಮ ವಿತರಕರು. ಅದನ್ನು ಇತರ ಜನರಿಗೆ ವಿಸ್ತರಿಸಲು ಕೂಡ ನಾನು ಆ ಅವಕಾಶವನ್ನು ಬಳಸಿದೆನು ಮತ್ತು ನಾನು ಯಾರಿಗೆ ಆ ಪತ್ರಿಕೆಯನ್ನು ಕೊಟ್ಟೆನೋ, ಅವರು ಯೇಸುವನ್ನು ತಮ್ಮ ವೈಯಕ್ತಿಕ ಪ್ರಭುವನ್ನಾಗಿ ಸ್ವೀಕರಿಸಿದರು. ದೇವರಿಗೆ ಸ್ತೋತ್ರವಾಗಲಿ.

ನಮಗೆ ಅವುಗಳನ್ನು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ದಯವಿಟ್ಟು ಕಳುಹಿಸಬೇಕೆಂದು ನಾನು ಕೋರಿಕೊಳ್ಳುತ್ತೇನೆ, ಅದರಿಂದ ಆತ್ಮಗಳನ್ನು ಗೆಲ್ಲಲು ನಮಗೆ ನೆರವಾಗುವುದು. ದೇವರು ನಿಮ್ಮ ಕೆಲಸವನ್ನು ಅನುಗ್ರಹಿಸಲಿ. ಧನ್ಯವಾದಗಳು.

ಕ್ರಿಸ್ತರಲ್ಲಿ ನಿಮ್ಮವನಾದ,

ಜಸಾಲು ಇಮಾಮು — ಆಂಡೊ ಸ್ಟೇಟ್, ನೈಜೀರಿಯ

## ನ್ಯೂ ಯಾರ್ಕ್

ಪ್ರೀತಿಯ ಪ್ಯಾಸ್ಟರ್ ಟೋನಿ ಅಲಾಮೊ,

ನಾನು ನಿಮ್ಮ ಸುದ್ದಿಪತ್ರಿಕೆಯನ್ನು ನ್ಯೂಯಾರ್ಕ್ ಪಟ್ಟಣದ ಒಂದು ಸಬ್ವೇಯಲ್ಲಿ ಪಡೆದೆನು, ಮತ್ತು ನನಗೆ ಅದರ ಅತ್ಯಂತ ಹೆಚ್ಚಿನ ಅಗತ್ಯವಿದ್ದಾಗ ಅದು ನನಗೆ ಸಿಕ್ಕಿತು. ನಿಮ್ಮ ಸಾಹಿತ್ಯದಲ್ಲಿರುವ ಮಾಹಿತಿಯು ಬಹಳ ಮುಖ್ಯವಾಗಿದೆ.

ನಾನು ನಿಮ್ಮ ಪುಸ್ತಕ ದ ಮೆಸ್ಸೈಅ, 100 ಸುದ್ದಿಪತ್ರಿಕೆಗಳು, ಹಾಗೂ ಸಿಡಿ ಮೇಲೆ ಸಂದೇಶಗಳನ್ನು ಕೂಡ ನಿಮ್ಮಿಂದ ಕೋರುತ್ತಿದ್ದೇನೆ.

ಧನ್ಯವಾದಗಳು

ಎರಿಕ್ ಎಫ್. — ರೈನ್ಬೆಕ್, ನ್ಯೂ ಯಾರ್ಕ್

# ಗುಣಪಡಿಸಿದ ಪುರಾವೆ

*(ಪೋರ್ಚುಗೀಸ್ ನಿಂದ ಅನುವಾದಿಸಲಾಗಿದೆ)*

ಅಕ್ಟೋಬರ್ 27, 2014

ನನ್ನ ಹೆಸರು ಪ್ಯಾಸ್ಟರ್ ಐಸ್ಯಾಕ್ ರಾಬರ್ಟೊ. ನಾನಿರುವುದು ಬ್ರೆಜಿಲ್ ನ ಪರಾನ ರಾಜ್ಯದ ಲೋಂಡ್ರಿನದಲ್ಲಿ, ಮತ್ತು ನಾನು ಈ ಇಮೇಲ್ ಮೂಲಕ ಒಂದು ಸಂಗತಿಯನ್ನು ಹಂಚಿಕೊಳ್ಳಲು ಬಯಸುತ್ತೇನೆ. ನಾನು 15 ವರ್ಷಗಳಿಂದ ಲೋಂಡ್ರಿನದಲ್ಲಿ ಪ್ಯಾಸ್ಟರ್ ಆಗಿದ್ದೇನೆ. ಮೂರು ವರ್ಷಗಳ ಹಿಂದೆ, ನನ್ನ ಕುಟುಂಬಕ್ಕೆ ಒಂದು ದುರಂತದ, ಆದರೆ ಮಹಾನ್ ಘಟನೆಯಿಂದ ಆಘಾತವಾಯಿತು.



ಜುಲೈ 24, 2011ರಂದು ನಮ್ಮ ಮಗಳು ಬೀಟ್ರಿಜ್ ಗ್ಯಾಬ್ರಿಯೆಲ (ಏಳು ವರ್ಷದವಳಾಗಿದ್ದಾಗ), ಕ್ರಾಸ್ ವಾಕ್ ನಲ್ಲಿ ನಡೆಯುತ್ತಿದ್ದಾಗ ಒಬ್ಬ ಟ್ಯಾಕ್ಸಿ ಡ್ರೈವರ್ ಅವಳಿಗೆ ಗುದ್ದಿದ ಕಾರಣ ಒಂದು ಗಂಭೀರವಾದ ರಸ್ತೆಅಪಘಾತಕ್ಕೆ ಗುರಿಯಾದಳು. ಆ ಹೊಡೆತದ ಪ್ರಭಾವ ಎಷ್ಟು ಬಲವಾಗಿತ್ತು ಎಂದರೆ, ತನಿಖೆದಾರರ ಪ್ರಕಾರ, ಅವಳು ಸುಮಾರು 21 ಅಡಿ ದೂರ ಎಸೆಯಲ್ಪಟ್ಟಳು. ನಾನು ಅವಳ ಬದಿಗೆ ಓಡಿದೆ. ಉಸಿರಾಟವಿರಲಿಲ್ಲ, ಮತ್ತು ನಾನು, "ಯಾರಾದರೂ ನೆರವಿಗಾಗಿ ಕರೆ ಮಾಡಿ!" ಎಂದು ಕೂಗಿದ್ದು ನನಗೆ ನೆನಪಿದೆ.

ನಾನು ಪುನಃ ಅವಳತ್ತ ನೋಡಿದಾಗ, ಒಂದು ಮೋಟರ್ ಸೈಕಲ್ ಟಯರ್ ನೋಡಿದೆ ಮತ್ತು ಒಂದು ಧ್ವನಿ, "ನಾನು ಸಹಾಯ ಮಾಡುತ್ತೇನೆ. ನಾನೊಬ್ಬ ಅಗ್ನಿಶಾಮಕ ಸಿಬ್ಬಂದಿ" ಎಂದು ಹೇಳಿತು. ಆ ಕ್ಷಣ, ದೇವರು ಮೊದಲ ಪ್ರತ್ಯುತ್ತರ ನೀಡುವವರನ್ನು ಅಲ್ಲಿ ಇರಿಸಿದರು. ಆತ ಬೀಟ್ರಿಜ್‌ಅನ್ನು ಅವಳ ಬೆನ್ನ ಮೇಲೆ ಮಲಗಿಸಿ ಸಿಪಿಆರ್ ಮಾಡಿದರು, ಮತ್ತು ಅವಳು ರಕ್ತವನ್ನು ಉಗುಳಿದಳು. ನೆರವು ಬಂತು, ಮತ್ತು ಅವರು ಆಂಬ್ಯುಲೆನ್ಸ್ ಒಳಗೆ ಅವಳಿಗೆ ಚಿಕಿತ್ಸೆ ನೀಡುತ್ತಿದ್ದಾಗ ನಾನು ಪ್ರಾರ್ಥಿಸಲು ಆರಂಭಿಸಿದೆ. ಸೈತಾನನು ನನ್ನನ್ನು ಎದುರಿಸುತ್ತಿದ್ದನು ಮತ್ತು ನನ್ನ ಮನಸ್ಸಿನಲ್ಲಿ ನನಗೆ ಒಂದು ಚಿತ್ರ ತೋರಿಸಿದನು. ಆ ಚಿತ್ರದಲ್ಲಿ, ನನಗೆ ಪರಿಚಯವಿದ್ದ ಒಬ್ಬ ಹುಡುಗನು ಕಾರ್ ಹೊಡೆತಕ್ಕೆ ಮಾತನಾಡುವ ಸಾಮರ್ಥ್ಯ ಮತ್ತು ತನ್ನ ಅಂಗಾಂಗಗಳ ನಡುವೆ ಹೊಂದಾಣಿಕೆಯನ್ನು ಕಳೆದುಕೊಂಡಿದ್ದನು. ಈಗ ಅವನ ಕುಟುಂಬ ಅವನನ್ನು ಒಂದು ವೀಲ್ಚೇರ್ ನಲ್ಲಿ ಹೊತ್ತು ತಿರುಗಾಡುತ್ತದೆ. ಆ ಕ್ಷಣದಲ್ಲಿ, ಸೈತಾನನು ಅವನ ಚಿತ್ರವನ್ನು ನನ್ನ ಕಣ್ಣು ಮುಂದೆ ತಂದು, "ನಿನ್ನ ಮಗಳೂ ಹಾಗೇ ಆಗುತ್ತಾಳೆ" ಎಂದು ಹೇಳುತ್ತಿದ್ದನು

ಅವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಈ ರೋಗನಿರ್ಣಯಗಳೊಂದಿಗೆ ದಾಖಲಿಸಿಕೊಳ್ಳಲಾಯಿತು: ಮುರಿದು ಹೋದ ಎಡಗಾಲು, ಮುರಿದ ಎಡ ಹೆಗಲ ಮೂಳೆ, ಮುರಿದ ಬಲ ಮತ್ತು ಎಡ ಕತ್ತಿನ ಮೂಳೆ, ಹರಿದುಹೋದ ಪ್ಲೀಹ, ಶ್ವಾಸಕೋಶದ ವಿರೂಪ ಮತ್ತು ತಲೆಗೆ 3ನೇ ಹಂತದ ಪೆಟ್ಟು (4ನೇ ಹಂತವೇ ಮರಣ).

ನಾವು ತೀವ್ರ ನಿಗಾ ಘಟಕಕ್ಕೆ ಬಂದಾಗ, ನಮ್ಮ ಮಗಳನ್ನು ಹಲವಾರು ಸಾಧನಗಳಿಗೆ ಜೋಡಿಸಿದ್ದನ್ನು, ಒಂದು ಯಂತ್ರದ ಮೂಲಕ ಉಸಿರಾಡುತ್ತಿರುವುದನ್ನು, ಮತ್ತು ಕೋಮದಲ್ಲಿರುವುದನ್ನು ನೋಡಿದೆವು.

ಅಪಘಾತವಾದ ಮೂರು ದಿನಗಳ ನಂತರ, ಜುಲೈ 27ರಂದು, ಅವಳಿಗೆ ಚಿಕಿತ್ಸೆ ನೀಡುತ್ತಿದ್ದ ನರಶಸ್ತ್ರಚಿಕಿತ್ಸಾ ತಜ್ಞರು ನಮಗೆ ಕರೆ ಮಾಡಿ, "ನನ್ನ ಬಳಿ ಒಳ್ಳೆಯ ಸುದ್ದಿ ಇಲ್ಲ. ಅವಳ ಪರಿಸ್ಥಿತಿ ಹದಗೆಟ್ಟಿದೆ. ಬೀಟ್ರಿಜ್ ಔಷಧೋಪಚಾರಗಳಿಗೆ ಸ್ಪಂದಿಸುತ್ತಿಲ್ಲ, ಮತ್ತು ಅವಳ ತಲೆಬುರುಡೆಯಲ್ಲಿ ರಕ್ತದೊತ್ತಡ ಉಂಟಾಗಿದೆ. ಮೆದುಳಿನ ಊತವಿದೆ. ಅದರಿಂದಾಗಿ ಮೆದುಳಿನಲ್ಲಿ ರಕ್ತಸಂಚಾರವಿಲ್ಲ, ಮತ್ತು ಮುಂದಿನ ಕೆಲವು ಗಂಟೆಗಳಲ್ಲಿ ಬೀಟ್ರೀಜ್ ನ ಮೆದುಳು ಸತ್ತುಹೋಗುತ್ತದೆ" ಎಂದು ಹೇಳಿದರು. "ನನ್ನ ಬಳಿ ಒಂದು ಕೊನೆಯ ಪರ್ಯಾಯವಿದೆ, ಅದೇನೆಂದರೆ ಬೀಟ್ರೀಜ್ ನ ಮೆದುಳು ವಿಸ್ತಾರವಾಗಲು ಜಾಗ ಸಿಗುವಂತೆ, ಅವಳ ಮೆದುಳಿನ ಮೇಲಿನ ಒತ್ತಡವನ್ನು ಕಡಿಮೆಗೊಳಿಸಲು ಪ್ರತಿ ಬದಿಯಲ್ಲಿ ಬುರುಡೆಯ ಒಂದು ತುಂಡನ್ನು ತೆಗೆಯಲು ಶಸ್ತ್ರಚಿಕಿತ್ಸೆ ಮಾಡುವುದು. ಆದಾಗ್ಯೂ, ಅವಳ ಪರಿಸ್ಥಿತಿ ಬದಲಾಗುತ್ತದೆ ಎಂಬುದಕ್ಕೆ ಅಥವಾ ಅವಳು ಶಸ್ತ್ರಚಿಕಿತ್ಸೆಯನ್ನು ಸಹಿಸಿಕೊಳ್ಳುತ್ತಾಳೆ ಎಂಬುದಕ್ಕೆ ಯಾವುದೇ ಭರವಸೆ ಇಲ್ಲ" ಎಂದು ವೈದ್ಯರು ಹೇಳಿದರು.

ಶಸ್ತ್ರಚಿಕಿತ್ಸೆಗೆ ನಾವು ಅನುಮತಿ ನೀಡಿದೆವು, ಏಕೆಂದರೆ ಕೊನೆಯ ಮಾತು ದೇವರದ್ದೇ ಆಗಿರುತ್ತದೆ ಎಂದು ನಮಗೆ ತಿಳಿದಿತ್ತು. ಅವರು ಎಲ್ಲಾ ಸಿದ್ಧತೆಗಳನ್ನು ನಡೆಸುತ್ತಿದ್ದಾಗ, ನಾವು ನಮ್ಮ ವಿದಾಯಗಳನ್ನು ಹೇಳಲು ಬೀಟ್ರಿಜ್ ನೊಂದಿಗಿರಲು ಅವರು ನಮಗೆ ಹೇಳಿದರು. ನಾನು ಮತ್ತೊಬ್ಬರ ಪರವಾಗಿ ಪ್ರಾರ್ಥಿಸುವ ಇತರರನ್ನು ಕರೆದು ಪರಿಸ್ಥಿತಿಯನ್ನು ವಿವರಿಸುತ್ತಿದ್ದಾಗ ನನ್ನ ಹೆಂಡತಿ ಪ್ರಾರ್ಥಿಸಲು ಪ್ರಾರಂಭಿಸಿದಳು. ನನ್ನ ಹೆಂಡತಿ ಬೀಟ್ರಿಜ್ ದೇಹದ ಮೇಲೆ ಬಾಗಿ ಪ್ರಾರ್ಥಿಸುತ್ತಿದ್ದಾಗ, ಒಬ್ಬ ವ್ಯಕ್ತಿ ಅವಳ ಬಳಿ ಬಂದು, "ತಾಯಿ, ದೇವರು ಅವಳನ್ನು ಕರೆದುಕೊಂಡು ಹೋಗಬೇಕೆಂದು ನೀವು ಪ್ರಾರ್ಥಿಸಬೇಕೆಂದು ನಾನು ಸಲಹೆ ನೀಡುತ್ತೇನೆ, ಏಕೆಂದರೆ ಅವಳು ಬದುಕುಳಿದರೆ, ಹಾಸಿಗೆಯಲ್ಲಿ ಒಂದು ಸಸ್ಯದಂತೆ ಬಾಳುತ್ತಾಳೆ ಅಷ್ಟೆ" ಎಂದು ಹೇಳಿದರು. ಬಹಳ ಹೊತ್ತಿನ ನಂತರ, ಏನು ನಡೆಯಿತು ಎಂದು ತಿಳಿಯದೆ, ನಾನು ನನ್ನ ಫೋನ್ ಮೇಲೆ ನನ್ನ ನಾದಿನಿಯಿಂದ ಒಂದು ಸಂದೇಶವನ್ನು ಪಡೆದೆನು. ಆಕೆ ಮಧ್ಯಾಹ್ನದ ಹೊತ್ತು ಪ್ರಾರ್ಥಿಸುತ್ತಿದ್ದಾಗ ಒಂದು ದರ್ಶನವಾಯಿತು ಎಂದು ಆಕೆ ಹೇಳಿದಳು. ಒಂದು ದುಷ್ಟ ಆತ್ಮ ನನ್ನ ಹೆಂಡತಿಯ ಬಳಿ ಬಂದು ಅದೇ ಪದಗಳನ್ನು ಹೇಳುವುದನ್ನು ಆಕೆ ನೋಡಿದಳು.

ಶಸ್ತ್ರಚಿಕಿತ್ಸೆಯು ಸುಮಾರು ಐದು ಗಂಟೆಗಳ ಕಾಲ ನಡೆಯಿತು. ಅವರು ಬೀಟ್ರಿಜ್ ಳನ್ನು ತೀವ್ರ ನಿಗಾ ಘಟಕಕ್ಕೆ ಕರೆತಂದಾಗ, ಅವಳ ತಲೆಯನ್ನು ಸಂಪೂರ್ಣವಾಗಿ ಹೊದಿಸಲಾಗಿತ್ತು ಮತ್ತು ಅವಳ ಮುಖ ವಿಕಾರಗೊಂಡಿತ್ತು. ಈಗ ನಾನು ಕೇವಲ ಕಾಯಬಹುದಿತ್ತು. ಅವಳನ್ನು ಗುಣಪಡಿಸಲು ನಾವು ದೇವರನ್ನು ಪ್ರಾರ್ಥಿಸಿದೆವು, ಆದರೆ ಕೆಟ್ಟ ಸುದ್ದಿಗಳು ಬರುತ್ತಲೇ ಇದ್ದವು – ನಿಮೋನಿಯ, ಒಂದು ಆಸ್ಪತ್ರೆಯ ಸೋಂಕು.

ಬೀಟ್ರಿಜ್ ನ ಹುಟ್ಟು ಹಬ್ಬದ ಒಂದು ದಿವಸದ ಮುನ್ನ (ಆಗಸ್ಟ್ 8), ಅವಳು ಕೋಮದಿಂದ ಹೊರಬರುವಳೆ ಎಂದು ನೋಡಲು ಅವಳ ನಿದ್ರಾಜನಕ ಔಷಧಗಳನ್ನು ನಿಲ್ಲಿಸುವುದಾಗಿ ವೈದ್ಯರು ಹೇಳಿದರು. "ಎದ್ದೇಳಲು ಅವಳಿಗೆ ಎಷ್ಟು ಸಮಯ ಬೇಕಾಗಬಹುದು ಎಂದು ನಿಮಗನಿಸುತ್ತದೆ?" ಎಂದು ನಾನು ಕೇಳಿದೆನು. "ಅದನ್ನು ಖಚಿತವಾಗಿ ತಿಳಿದುಕೊಳ್ಳಲು ಸಾಧ್ಯವಿಲ್ಲ," ಎಂದು ಅವರು ಹೇಳಿದರು. "ಅವಳು ಇಂದು, ನಾಳೆ, ಮುಂದಿನ ವಾರ, ಮುಂದಿನ ತಿಂಗಳು, ಮುಂದಿನ ವರ್ಷ ಏಳಬಹುದು, ಆದರೆ ಅವಳು ಎದ್ದೇಳದೆಯೇ ಇರುವ ಸಾಧ್ಯತೆಯೂ ಇದೆ," ಎಂದು ಅವರು ಮಾತು ಮುಗಿಸಿದರು.



ಕೆಲವು ದಿನಗಳ ನಂತರ, ಉಸಿರಾಟದ ಉಪಕರಣವನ್ನು ತೆಗೆಯಲಾಯಿತು. ಅವಳು ಏಳಲು ಪ್ರಾರಂಭಿಸಿದಳು ಎಂದು ನಾವು ಸಂಭ್ರಮಿಸಿದೆವು. ಆದಾಗ್ಯೂ, ರಾತ್ರಿ ವೇಳೆ ಬೀಟ್ರಿಜ್ ಉಸಿರಾಟದಲ್ಲಿ ದ್ರವವನ್ನು ಒಳಗೆಳೆದುಕೊಂಡಳು ಮತ್ತು ಅವಳ ಉಸಿರಾಟ ಹದಗೆಟ್ಟಿತು. ನಾವು ಆಸ್ಪತ್ರೆಗೆ ಬಂದಾಗ, ಅವಳು ಕಷ್ಟದಲ್ಲಿ ಉಸಿರಾಡುವು-

ದನ್ನು ನೋಡಿದೆವು. ಅವಳ ಪರಿಸ್ಥಿತಿ ಸುಧಾರಿಸಲು ವೈದ್ಯರ ತಂಡವು ಸಾಧ್ಯವಾದುದನ್ನೆಲ್ಲಾ ಮಾಡುತ್ತಿತ್ತು. ನಾವು ಊಟಕ್ಕೆ ಹೊರಹೋದೆವು, ಮತ್ತು ನಾವು ಹಿಂದಿರುಗಿ ಒಳಪ್ರವೇಶಿಸಲು ಕೇಳಿದಾಗ, ನಮ್ಮನ್ನು ತಡೆಯಲಾಯಿತು. ನಾನು ಬಾಗಿಲಿನಿಂದ ನೋಡಿದೆನು ಮತ್ತು ಬಹುಮಟ್ಟಿಗೆ ಸಂಪೂರ್ಣ ತಂಡವು ಅವಳ ಹಾಸಿಗೆಯನ್ನು ಸುತ್ತುವರಿದು ಅಳುತ್ತಿತ್ತು. ನಾವು ಹಲವಾರು ನಿಮಿಷಗಳ ವರೆಗೆ ಕಾಯಬೇಕಾಯಿತು, ಮತ್ತು ಒಳಪ್ರವೇಶಿಸಲು ನಮಗೆ ಅನುಮತಿ ದೊರೆತಾಗ, ಬೀಟ್ರಿಜ್ ಗೆ ಉಸಿರಾಟದ ನಾಳವನ್ನು ಪುನಃ ಒಳಸೇರಿಸಿರುವುದನ್ನು ನಾವು ನೋಡಿದೆವು. "ನಾವು ಶ್ವಾಸನಾಳವನ್ನು ಕುಯ್ಯುವ ಶಸ್ತ್ರಚಿಕಿತ್ಸೆಯನ್ನು ಮಾಡಬೇಕಾಗಬಹುದು, ಮತ್ತು ಬೀಟ್ರಿಜ್ ತನ್ನ ಆಮ್ಲಜನಕವನ್ನು ಒಂದು ನಾಳದ ಮೂಲಕ ಉಸಿರಾಡಬೇಕಾಗುತ್ತದೆ. ಅವಳು ತಾನಾಗಿ ಉಸಿರಾಡುವ ಸಾಮರ್ಥ್ಯವನ್ನು ಕಳೆದುಕೊಳ್ಳಬಹುದು" ಎಂದು ವೈದ್ಯರಲ್ಲಿ ಒಬ್ಬರು ಹೇಳಿದರು. ಇನ್ನೂ ಹೆಚ್ಚಿನ ಕೆಟ್ಟ ಸುದ್ದಿ – ಪ್ರಾರ್ಥಿಸಲು ಮತ್ತೊಂದು ಕಾರಣ. ಹಲವು ದಿನಗಳ ನಂತರ, ಬೀಟ್ರಿಜ್ ಕೋಮದಿಂದ ಹೊರಬಂದು ಚಿಕಿತ್ಸಾಲಯಕ್ಕೆ ಹೋದಳು.

ನಾವು ಸಂಪೂರ್ಣ ಸಮಯ ದೇವರನ್ನು ಕೂಗಿ ಪ್ರಾರ್ಥಿಸುತ್ತಲೇ ಇದ್ದೆವು ಮತ್ತು ಉಪವಾಸ ಮಾಡುತ್ತಲೇ ಇದ್ದೆವು. ಬೀಟ್ರಿಜ್ ಚಿಕಿತ್ಸಾಲಯಕ್ಕೆ ಹೋದಾಗ ನಾವು ಆ ಕೊಠಡಿಯನ್ನು ದಿನದ 24 ಗಂಟೆಗಳ ಪ್ರಾರ್ಥನಾ ಕೇಂದ್ರವನ್ನಾಗಿ ಪರಿವರ್ತಿಸಿದೆವು. ಆರಾಧನಾ ಗೀತೆಗಳನ್ನು ನುಡಿಸುತ್ತಿದ್ದೆವು. ನಾವು ಪ್ರತಿ ಗಂಟೆ ಪ್ರಾರ್ಥಿಸುತ್ತಿದ್ದೆವು. ಜನರು ಒಳಬಂದು ಬೀಟ್ರಿಜ್ ನ ಕಾಲು ಪ್ಲಾಸ್ಟರ್ ಅಚ್ಚಿನಲ್ಲಿದ್ದು, ಉಸಿರಾಟದ ಮತ್ತು ಆಹಾರ ಪೂರೈಕೆಯ ಯಂತ್ರಗಳಿಗೆ ಜೋಡಿಸಲ್ಪಟ್ಟು ಅವಳು ಹಾಸಿಗೆಯಲ್ಲಿರುವುದನ್ನು ಕಂಡು, "ಈ ಜಾಗದಲ್ಲಿ ಇಷ್ಟು ಶಾಂತಿ ಇರಲು ಹೇಗೆ ಸಾಧ್ಯ?" ಎಂದು ಕೇಳುತ್ತಿದ್ದರು. ಒಟ್ಟಿಗೆ 53 ದಿನಗಳ ಆಸ್ಪತ್ರೆವಾಸವಿತ್ತು.

ಬೀಟ್ರಿಜ್ ಳನ್ನು ಆಸ್ಪತ್ರೆಯಿಂದ ಬಿಡುಗಡೆಗೊಳಿಸಿದಾಗ ಅವಳು ಚೇತರಿಸಿಕೊಳ್ಳುವ ಯಾವುದೇ ಸಂಕೇತಗಳನ್ನು ತೋರಿಸದೆಯೆ ಮನೆಗೆ ಬಂದಳು. ಮನೆಯಲ್ಲಿ ನಾವು ಆಸ್ಪತ್ರೆಯ ಮಂಚ, ಸ್ನಾನದ ಕುರ್ಚಿ, ಮತ್ತು ವೀಲ್ಚೇರ್‌ಅನ್ನು ಸಿದ್ಧಗೊಳಿಸಿದ್ದೆವು. ನನ್ನ ಹೆಂಡತಿ ದೈಹಿಕ ಚಿಕಿತ್ಸಕರೊಂದಿಗೆ ಮಾತನಾಡುತ್ತಿದ್ದಳು, ಮತ್ತು "ವೈದ್ಯರೇ, ಬೀಟ್ರಿಜ್ ನಡೆಯಲು ಇನ್ನೂ ಎಷ್ಟು ಸಮಯ ಬೇಕಾಗಬಹುದು ಎಂದು ನಿಮಗನಿಸುತ್ತದೆ?" ಎಂದು ಕೇಳಿದಳು. ವೈದ್ಯರು, "ನಾನು ಹಲವು ವರ್ಷಗಳಿಂದ ಈ ಕ್ಷೇತ್ರದಲ್ಲಿದ್ದೇನೆ, ಮತ್ತು ಬೀಟ್ರಿಜ್ ಗೆ ಆಗಿರುವಂಥ ಅಪಘಾತದಲ್ಲಿ ಬದುಕುಳಿದವರ ಬಗ್ಗೆ ನಾನು ಯಾವುದೇ ವೈದ್ಯಕೀಯ ಸಾಹಿತ್ಯದಲ್ಲಿ ಓದಿಲ್ಲ ಅಥವಾ ಯಾವುದೇ ಕಥೆಯನ್ನು ಓದಿಲ್ಲ. ಬಹುಶಃ ಅವಳು ಒಂದು ದಿನ ಊರುಗೋಲಿನ ಅಥವಾ ವಾಕರ್ ಸಹಾಯದೊಂದಿಗೆ ನಡೆಯಬಹುದು, ಆದರೆ ನನ್ನ ಅಭಿಪ್ರಾಯದಲ್ಲಿ ಪುನಃ ಸಾಮಾನ್ಯವಾಗಿ ನಡೆಯಲು ಎಂದೂ ಸಾಧ್ಯವಾಗುವುದಿಲ್ಲ" ಎಂದು ಉತ್ತರಿಸಿದರು. ಆದಾಗ್ಯೂ, ಅವಳು ಆ ಪರಿಸ್ಥಿತಿಗೆ ಬರುವುದಿಲ್ಲ ಎಂದು ನಾವು ಮನದಲ್ಲಿ ನಿರ್ಧರಿಸಿದ್ದೆವು. ನಾವು ದೃಢತೆಯಿಂದ ನಿರಂತರವಾಗಿ, ಕೆಲವೊಮ್ಮೆ ನಂಬಿಕೆಯಿಂದ, ಕೆಲವೊಮ್ಮೆ ಕಣ್ಣೀರಿಡುತ್ತಾ, ಆದರೆ ಯಾವಾಗಲೂ ವಿಶ್ವಾಸದಿಂದ ಪ್ರಭುವನ್ನು ಅರಸುತ್ತಿದ್ದೆವು. ಒಂದು ದಿನ, ನಮಗೆ ತಜ್ಞವೈದ್ಯರಿಗೆ ಶಿಫಾರಸು ಬೇಕಿದ್ದರಿಂದ ಅವಳನ್ನು ಸಮುದಾಯ ಚಿಕಿತ್ಸಾಲಯಕ್ಕೆ ಕರೆದುಕೊಂಡು ಹೋದೆವು, ಮತ್ತು ಅದು ತುರ್ತಾಗಿತ್ತು ಎಂದು ನಾನು ವೈದ್ಯರಿಗೆ ಹೇಳಿದೆನು. ವೈದ್ಯರು ಬೀಟ್ರಿಜ್ ಳನ್ನು ನೋಡಬೇಕೆಂದು ಹೇಳಿದರು, ಮತ್ತು ಅವಳನ್ನು ಕೈಯಲ್ಲಿ ಎತ್ತಿಕೊಂಡು ನಾನು ಅವರ ಕಚೇರಿಯನ್ನು ಪ್ರವೇಶಿಸಿದಾಗ, ಅವರು, "ಸರ್, ನಿಮಗೆ ಇಷ್ಟು ಅವಸರವೇಕೆ? ಈ ಮಗುವಿನ ಪರಿಸ್ಥಿತಿಗೆ ಸಂಬಂಧಿಸಿದಂತೆ ಏನು ಬದಲಾಗಬಹುದು?" ಎಂದು ವೈದ್ಯರು ಕೇಳಿದರು.

ಬೀಟ್ರಿಜ್ ಳ ಬುರುಡೆಯ ಮೂಳೆಯನ್ನು ತೆಗೆಯಲಾದ ಜಾಗದಲ್ಲಿ ಒಂದು ಕೃತಕ ಮೂಳೆಯನ್ನು ಇಂಪ್ಲ್ಯಾಂಟ್ ಮಾಡಲು ಅವಳು ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಿತ್ತು. ನಮಗೆ (ಬ್ರೆಜಿಲಿಯನ್ ರಿಯಾಲ್) $147,500.00 (ಸುಮಾರು $60,000.00 ಯುಎಸ್ ಡಿ) ರ ಅಂದಾಜು ದೊರಕಿತು. ನಮ್ಮ ಬಳಿ ಅಷ್ಟು ಹಣವಿರಲಿಲ್ಲ, ಆದ್ದರಿಂದ ಪ್ರಾರ್ಥಿಸಲು ನಮ್ಮ ಬಳಿ ಮತ್ತೊಂದು ಕಾರಣವಿತ್ತು. ಒಬ್ಬ ಸ್ನೇಹಿತರ ಮೂಲಕ ದೇವರಿಂದ ಆದೇಶಗಳನ್ನು ಪಡೆದ ನಂತರ, ನಾವು ಹಣ ಒಟ್ಟುಗೂಡಿಸಲು ಚಳುವಳಿಯನ್ನು ಪ್ರಾರಂಭಿಸಿದೆವು. ಒಂದು ಗುರುವಾರದಂದು ನನಗೆ ಒಂದು ಕರೆ ಬಂತು. ಒಬ್ಬ ಮಹಿಳೆ ಬೀಟ್ರಿಜ್ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಲು ಆರಂಭಿಸಿದರು. ನಮಗೆ ಇನ್ನೂ ಎಷ್ಟು ಹಣದ ಅಗತ್ಯವಿದೆ ಎಂದು ಕೇಳಿದರು, ಮತ್ತು ನಾನು (ಬಿಆರ್‌ಎಲ್)$57,000.00 ($23,000.00 ಯುಎಸ್ ಡಿ) ಎಂದು ಹೇಳಿದೆನು. ತಾನು ನಮಗಾಗಿ ಏನಾದರೂ ಸಹಾಯ ಮಾಡಲು ಪ್ರಯತ್ನಿಸುವುದಾಗಿ ಅವರು ಹೇಳಿದರು. ಮುಂದಿನ ಸೋಮವಾರದಂದು, ನಾನು ಉಳಿದ ಹಣವನ್ನು ತೆಗೆಯಲು ಬ್ಯಾಂಕಿಗೆ ಹೋದಾಗ, ಆ ವ್ಯಕ್ತಿ ನಮಗೆ ಅಗತ್ಯವಿದ್ದ ಹಣವನ್ನು ಜಮಾ ಮಾಡಿದ್ದರು ಎಂದು ನಾನು ಕಂಡೆನು. 40 ದಿನಗಳಲ್ಲಿ ನಮಗೆ ಅಗತ್ಯವಿದ್ದ ಪ್ರತಿಯೊಂದು ಪೈಸೆಯನ್ನೂ ಒಟ್ಟುಗೂಡಿಸಲು ನಮಗೆ ಸಾಧ್ಯವಾಯಿತು. ಎಲ್ಲವೂ ದೇವರ ದಯೆ!

ಡಿಸೆಂಬರ್ 23,2011ರಂದು ಶಸ್ತ್ರಚಿಕಿತ್ಸೆ ನಡೆಯಿತು. ಸುಮಾರು ಆ ಹೊತ್ತಿಗೆ, ಬೀಟ್ರಿಜ್ ಗೆ ಆಗಲೆ ಕೆಲವು ದಿಂಬುಗಳ ಸಹಾಯದಿಂದ ಕುಳಿತುಕೊಳ್ಳಲು ಸಾಧ್ಯವಾಗುತ್ತಿತ್ತು ಮತ್ತು ಅವಳಿಗೆ ವೀಲ್ ಚೇರ್ ನಲ್ಲಿ ಕೂಡ ಕುಳಿತುಕೊಳ್ಳಲು ಸಾಧ್ಯವಾಗುತ್ತಿತ್ತು.

ಡಿಸೆಂಬರ್ 27ರಂದು, ಚರ್ಚಿಗೆ ಹೊರಡುವ ಮುನ್ನ ನಾನು ಬೀಟ್ರಿಜ್ ಗೆ ವಿದಾಯ ಹೇಳಲು ಹೋದೆನು. ಅವಳ ಕೈ ಹಿಡಿದುಕೊಂಡು ನಾನು ಚರ್ಚಿಗೆ ಹೋಗುತ್ತಿರುವುದಾಗಿ ಹೇಳಿದೆನು. ಅವಳು ನನ್ನ ಕೈಯನ್ನು ಎಳೆಯುವ ಅನುಭವವಾಯಿತು. ನಾನು ಅವಳನ್ನು ಗಟ್ಟಿಯಾಗಿ ಹಿಡಿಕೊಂಡೆನು ಮತ್ತು ಕೂಡಲೆ ಅವಳು ಎದ್ದು ನಿಂತಳು. ನನಗೆ ಹೆದರಿಕೆಯಾಯಿತು ಮತ್ತು ನಾನು ಒಂದು ಹೆಜ್ಜೆ ಹಿಂದಕ್ಕಿಟ್ಟೆ, ಮತ್ತು ಅದೇ ಹೊತ್ತಿಗೆ, ಅವಳು ಮತ್ತೊಂದು ಹೆಜ್ಜೆ ಮುಂದಕ್ಕಿಟ್ಟು ನಡೆಯಲಾರಂಭಿಸಿದಳು. ದೇವರು ದಯಾಮಯ!

ದಿನಗಳು ಕಳೆದಂತೆ, ಬೀಟ್ರಿಜ್ ತನ್ನ ಸಾಮರ್ಥ್ಯಗಳನ್ನು ಮರಳಿ ಪಡೆಯುವುದನ್ನು ಮುಂದುವರಿಸಿದಳು. ಅವಳು ಮಾತನಾಡಲು ಮತ್ತು ಬರೆಯಲು ಆರಂಭಿಸಿದಳು. ಮೇ 2012ರಲ್ಲಿ ಅವಳು ಶಾಲೆಗೆ ಹಿಂದಿರುಗಿದಳು.

ಇಂದು, ಮೂರು ವರ್ಷಗಳ ನಂತರ, ಅವಳು ಅಲೌಕಿಕ ಪವಾಡದ ಒಂದು ಜೀವಂತ ಸಾಕ್ಷಿಯಾಗಿದ್ದಾಳೆ, ದೇವರು ತನ್ನ ದಯಾವಾಕ್ಯಕ್ಕೆ ಬದ್ಧರಾಗಿದ್ದಾರೆ ಮತ್ತು ನಂಬುವವರೆಲ್ಲರ ಪರವಾಗಿ ನಡೆಯುತ್ತಾರೆ ಎಂಬುದಕ್ಕೆ ಪುರಾವೆಯಾಗಿದ್ದಾರೆ. ನಿಮ್ಮ ಬದುಕಿಗಾಗಿ ಎಲ್ಲಾ ಸಮಯದಲ್ಲಿ ನಾನು ಹೇಳುವ ಮಾತು ಏನೆಂದರೆ, ನಂಬುವವನಿಗೆ ಎಲ್ಲವೂ ಸಾಧ್ಯವಾಗುವದು (ಮಾರ್ಕ 9:23).

ಕೆಲವು ದಿನಗಳ ಹಿಂದೆ, ನನ್ನ ಹೆಂಡತಿ ಒಬ್ಬ ದೈಹಿಕ ಚಿಕಿತ್ಸಕರೊಂದಿಗಿದ್ದಳು, ಮತ್ತು ಆ ವೈದ್ಯರು ಬೀಟ್ರಿಜ್ ಳನ್ನು ತನ್ನ ವಿದ್ಯಾರ್ಥಿಗಳಲ್ಲಿ ಒಬ್ಬರಿಗೆ ತೋರಿಸಿ, "ಇದೊಂದು ಪವಾಡ, ಏಕೆಂದರೆ ದೇವರು ಇಲ್ಲದೆ ಹೋಗಿದ್ದರೆ, ಇವಳು ಇಲ್ಲಿ ಇರುತ್ತಿರಲಿಲ್ಲ. ವೈದ್ಯಕೀಯಶಾಸ್ತ್ರ ಅವಳಿಗಾಗಿ ಏನೂ ಮಾಡಲು ಸಾಧ್ಯವಿರಲಿಲ್ಲ" ಎಂದು ಹೇಳಿದರು.

ವೈದ್ಯಕೀಯಶಾಸ್ತ್ರ ಏನನ್ನೂ ಮಾಡಲು ಸಾಧ್ಯವಿರಲಿಲ್ಲ, ಆದರೆ ದೇವರಿಗೆ ಸಾಧ್ಯ! ಆತ ನಿಮ್ಮ ಬದುಕಿನಲ್ಲಿಯೂ ಕೆಲಸ ಮಾಡಬಹುದು!

---

ಪ್ಯಾಸ್ಟರ್ ಐಸ್ಯಾಕ್ ರಾಬರ್ಟೊ

ಈ ಪುರಾವೆಯನ್ನು ಲಾಂಡ್ರಿನದಲ್ಲಿ ಇಡಿ ಚರ್ಚಿನೊಂದಿಗೆ ಹಂಚಿಕೊಳ್ಳಲಾಗಿದೆ ಮತ್ತು ನಮ್ಮ ನಂಬಿಕೆಗೆ ಸವಾಲೊಡ್ಡುವ ದೇವರ ಶಕ್ತಿಯ ಒಂದು ಉದಾಹರಣೆಯಾಗಿದೆ. ಚರ್ಚ್ ನಲ್ಲಿ ದಾಖಲಿಸಲಾದ ಪುರಾವೆಯನ್ನು ಯುಟ್ಯೂಬ್ ನಲ್ಲಿ ವೀಕ್ಷಿಸಿ: http://www.youtube.com/watch?v=YHqbBk0A4nA.

## ಕ್ಯೂಬ

*(ಸ್ಪ್ಯಾನಿಷ್ ನಿಂದ ಅನುವಾದಿಸಲಾಗಿದೆ)*

ಕ್ಯೂಬದಿಂದ ನಮಸ್ಕಾರಗಳು,

ಪ್ರಭುವಿನ ಶಾಂತಿ ಎಲ್ಲರೊಂದಿಗಿರಲಿ. ಪ್ರಭುವಿನ ಕಾರಣ, ಇಂದು ಇನ್ನೂ ಎರಡು ಪ್ಯಾಕೇಜ್ ಗಳನ್ನು ಪಡೆಯುವ ಅನುಗ್ರಹ ನಮ್ಮದಾಯಿತು.

ಈ ಮಿನಿಸ್ಟ್ರಿಯ ಮೂಲಕ ದೇವರ ವಾಕ್ಯವನ್ನು ಸಂಪೂರ್ಣ ಜಗತ್ತಿಗೆ ಸಾರುವ ಅನುಗ್ರಹವನ್ನು ಪಡೆದಿರುವ ದೇವರ ಎಲ್ಲಾ ಸೇವಕರಿಗೆ ನಮ್ಮ ಧನ್ಯವಾದಗಳನ್ನು ತಿಳಿಸಿ. ಎಲ್ಲರಿಗೂ ನನ್ನ ವಿಶೇಷ ಧನ್ಯವಾದಗಳು.

ದೇವರು ನಿಮ್ಮನ್ನು ಅನುಗ್ರಹಿಸಲಿ

ರೆವರೆಂಡ್ ಮಾರೆರೊ ಹವಾನಾ, ಕ್ಯೂಬ

# ಒಂದೇ ಉಪಾಯ

*(ಪುಟ 4 ರಿಂದ ಮುಂದುವರಿದಿದೆ)*

ಎಂದೂ ಹಳೆಯದಾಗದ ಪ್ರೀತಿಯನ್ನು ತರಲಿ. ನಿತ್ಯಜೀವದ ಬೀಜವನ್ನು ಸ್ವೀಕರಿಸಲಿ. ಈ ಪ್ರಾರ್ಥನೆಯನ್ನು ಹೇಳುವ ಮೂಲಕ ಪ್ರಾರಂಭಿಸಿ:

**ನನ್ನ ಪ್ರಭುವೇ ಮತ್ತು ನನ್ನ ದೇವರೇ, ಪಾಪಿಯಾದ ನನ್ನ ಮೇಲೆ ಕರುಣೆ ತೋರಿ.[18] ಯೇಸು ಕ್ರಿಸ್ತರು ಜೀವಸ್ವರೂಪನಾದ ದೇವರ ಮಗನು ಎಂದು ನಾನು ನಂಬಿದ್ದೇನೆ.[19] ನನ್ನ ಹಿಂದಿನ ಎಲ್ಲಾ ಪಾಪಗಳನ್ನು ಕ್ಷಮಿಸುವುದಕ್ಕಾಗಿ ಆತ ಶಿಲುಬೆಯಲ್ಲಿ ಮರಣ ಹೊಂದಿದನು ಮತ್ತು ತನ್ನ ಅಮೂಲ್ಯ ರಕ್ತವನ್ನು ಸುರಿಸಿದನು ಎಂದು ನಾನು ನಂಬಿದ್ದೇನೆ.[20] ದೇವರು ಪವಿತ್ರಾತ್ಮನ ಶಕ್ತಿಯಿಂದ ಯೇಸುವನ್ನು ಸತ್ತವರಿಂದ ಪುನರುತ್ಥಾನಗೊಳಿಸಿದರು,[21] ಮತ್ತು ಈ ಗಳಿಗೆಯಲ್ಲಿ ನನ್ನ ಪಾಪನಿವೇದನೆಯನ್ನು ಮತ್ತು ಈ ಪ್ರಾರ್ಥನೆಯನ್ನು ಕೇಳುತ್ತಾ ಆತ ದೇವರ ಬಲಗಡೆಯಲ್ಲಿ ಕುಳಿತಿದ್ದಾನೆ ಎಂದು ನಾನು ನಂಬಿದ್ದೇನೆ.[22] ಪ್ರಭು ಯೇಸುವೇ, ನಾನು ನನ್ನ ಹೃದಯದ ಬಾಗಿಲನ್ನು ತೆರೆದು ನಿಮ್ಮನ್ನು ನನ್ನ ಹೃದಯದೊಳಗೆ ಆಮಂತ್ರಿಸುತ್ತೇನೆ.[23] ಕಾಲ್ವಾರಿಯಲ್ಲಿ ಶಿಲುಬೆಯ ಮೇಲೆ ನನ್ನ ಜಾಗದಲ್ಲಿ ನೀವು ಸುರಿಸಿದ ಅಮೂಲ್ಯ ರಕ್ತದಲ್ಲಿ ನನ್ನ ಎಲ್ಲಾ ಹೊಲಸು ಪಾಪಗಳನ್ನು ತೊಳೆದುಬಿಡಿ.[24] ನೀವು ನನ್ನನ್ನು ತಿರಸ್ಕರಿಸುವುದಿಲ್ಲ, ಪ್ರಭು ಯೇಸುವೇ; ನೀವು ನನ್ನ ಪಾಪಗಳನ್ನು ಕ್ಷಮಿಸುವಿರಿ ಮತ್ತು ನನ್ನ ಆತ್ಮವನ್ನು ರಕ್ಷಿಸುವಿರಿ. ನನಗೆ ಗೊತ್ತು ಏಕೆಂದರೆ ನಿಮ್ಮ ಪದವಾದ ಬೈಬಲ್ ಹೀಗೆಂದು ಹೇಳುತ್ತದೆ.[25] ನೀವು ಯಾರನ್ನೂ ತಿರಸ್ಕರಿಸುವುದಿಲ್ಲ ಎಂದು ನಿಮ್ಮ ಪದ ಹೇಳುತ್ತದೆ, ಮತ್ತು ಅದರಲ್ಲಿ ನಾನೂ ಸೇರಿದ್ದೇನೆ.[26] ಆದ್ದರಿಂದ ನೀವು ನನ್ನ ಮಾತು ಕೇಳಿಸಿಕೊಂಡಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನೀವು ನನಗೆ ಉತ್ತರಿಸಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನಾನು ರಕ್ಷಣೆ ಹೊಂದಿದ್ದೇನೆ ಎಂದು ನನಗೆ ತಿಳಿದಿದೆ.[27] ನನ್ನ ಆತ್ಮವನ್ನು ರಕ್ಷಣೆ ಮಾಡಿದ್ದಕ್ಕಾಗಿ, ಪ್ರಭು ಯೇಸುವೇ, ನಾನು ನಿಮಗೆ ಕೃತಜ್ಞನು, ಮತ್ತು ನೀವು ಆದೇಶಿಸಿದಂತೆ ನಡೆದುಕೊಂಡು ಇನ್ನು ಮುಂದೆ ಪಾಪ ಮಾಡದೆ ನಾನು ನನ್ನ ಕೃತಜ್ಞತೆಯನ್ನು ತೋರಿಸುತ್ತೇನೆ.[28]**

ರಕ್ಷಣೆಯ ನಂತರ, ಯೇಸುವು ತಂದೆಯ, ಮಗನ, ಮತ್ತು ಪವಿತ್ರಾತ್ಮದ ಹೆಸರಿನಲ್ಲಿ, ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ, ದೀಕ್ಷಾಸ್ನಾನ ಮಾಡಿದರೆಂದು ಹೇಳಲಾಗುತ್ತದೆ.[29] ಬೈಬಲ್ ಸೊಸೈಟಿ ಆಫ್ ಇಂಡಿಯಾದ 'ಸತ್ಯವೇದವು" [ಇಂಗ್ಲಿಷ್ ನ ಕೆಜೆವಿ] ಬೈಬಲ್ ಅನ್ನು ಓದಿ, ಮತ್ತು ನೀವು ಸಾಯುವ ತನಕ ಅದು ಹೇಳಿದ್ದನ್ನು ಮಾಡಿ.[30]

ರಕ್ಷಣೆಯ ಬಗ್ಗೆ ನೀವು ಇತರರಿಗೆ ತಿಳಿಸಬೇಕೆಂದು ಪ್ರಭು ಬಯಸುತ್ತಾರೆ (ಮಾರ್ಕ 16:15). ನೀವು ಪ್ಯಾಸ್ಟರ್ ಟೋನಿ ಅಲಾಮೊ ಅವರ ಸುವಾರ್ತೆಯ ಸಾಹಿತ್ಯದ ವಿತರಕರಾಗಬಹುದು. ನಾವು ನಿಮಗೆ ಸಾಹಿತ್ಯವನ್ನು ಯಾವುದೇ ಶುಲ್ಕವಿಲ್ಲದೆ ಕಳುಹಿಸುತ್ತೇವೆ. ಹೆಚ್ಚಿನ ಮಾಹಿತಿಗಾಗಿ ನಮಗೆ ಕರೆಮಾಡಿ ಅಥವಾ ಇಮೇಲ್ ಮಾಡಿ. ಈ ಸಂದೇಶವನ್ನು ಬೇರೆಯವರೊಂದಿಗೆ ಹಂಚಿಕೊಳ್ಳಿ.

ನಾವು ಪಾಸ್ಟರ್ ಅಲಾಮೊ ಅವರ ಸಾಹಿತ್ಯವನ್ನು ಅನೇಕ ಭಾಷೆಗಳಲ್ಲಿ ಮುದ್ರಿಸುತ್ತೇವೆ, ಮತ್ತು ಪ್ರಂಪಚದೆಲ್ಲೆಡೆ ಕಳುಹಿಸುತ್ತೇವೆ. ನಾವು ಮುದ್ರಣ ಕಾಗದ ಮತ್ತು ಶಿಪ್ಪಿಂಗ್ ಗಾಗಿ ಅನೇಕ ಮಿಲಿಯ ಡಾಲರುಗಳನ್ನುವ್ಯಯಿಸುತ್ತೇವೆ, ಹಾಗಾಗಿ ನಮಗೆ ನಿಮ್ಮ ಪ್ರಾರ್ಥನೆ ಮತ್ತು ಆರ್ಥಿಕ ಸಹಾಯದ ಅಗತ್ಯವಿದೆ.

ಜಗತ್ತು ರಕ್ಷಣೆ ಪಡೆಯಬೇಕೆಂದು ನೀವು ಬಯಸಿದರೆ ಯೇಸು ಆದೇಶಿಸುವಂತೆ, ದೇವರಿಂದ ಆತನ ದಶಾಂಶಗಳನ್ನು ಮತ್ತು ಕೊಡುಗೆಗಳನ್ನು ಕದ್ದುಕೊಳ್ಳಬೇಡಿ. ದೇವರು ಹೀಗೆ ಹೇಳಿದರು, "ನರಮನುಷ್ಯನು ದೇವರಿಂದ ಕದ್ದುಕೊಳ್ಳಬಹುದೇ? ನೀವಾದರೋ ನನ್ನಿಂದ ಕದ್ದುಕೊಳ್ಳುತ್ತಿದ್ದೀರಿ. ನಿನ್ನಿಂದ ಏನು ಕದ್ದುಕೊಂಡಿದ್ದೀರಿ ಎಂದು ಕೇಳುತ್ತೀರೋ? ದಶಮಾಂಶ, ನನಗೋಸ್ಕರ ಪ್ರತ್ಯೇಕಿಸಬೇಕಾದ ಪದಾರ್ಥ, ಇವುಗಳನ್ನೇ. ನೀವು ಅಂದರೆ ಈ ಜನಾಂಗದವರೆಲ್ಲಾ [ಮತ್ತು ಈ ಸಂಪೂರ್ಣ ಜಗತ್ತು] ನನ್ನಿಂದ ಕದ್ದುಕೊಳ್ಳುವವರಾದ ಕಾರಣ ಶಾಪಗ್ರಸ್ತರಾಗಿದ್ದೀರಿ. ನನ್ನ ಆಲಯವು [ರಕ್ಷಣೆ ಹೊಂದಿರುವ ಆತ್ಮಗಳು] ಆಹಾರಶೂನ್ಯವಾಗದಂತೆ [ಆಧ್ಯಾತ್ಮಿಕ ಆಹಾರ] ನೀವು ದಶಮಾಂಶವನ್ನು [ದಶಮಾಂಶ ಎಂದರೆ ನಿಮ್ಮ ಒಟ್ಟು ಆದಾಯದ 10%] ಯಾವತ್ತೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ; ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಯುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ; ಇದು ಸೇನಾಧೀಶ್ವರ ಯೆಹೋವನ ನುಡಿ. ನುಂಗುವ ಹುಳವನ್ನು ನಾನು ನಿಮಗಾಗಿ ತಡೆಯುವೆನು, ಅದು ನಿಮ್ಮ ಭೂಮಿಯ ಫಲವನ್ನು ನಾಶ ಮಾಡದು; ನಿಮ್ಮ ದ್ರಾಕ್ಷಿಯ ಹಣ್ಣು ತೋಟದಲ್ಲಿ ಉದುರಿಹೋಗದಂತಾಗುವುದು; ಇದು ಸೇನಾಧೀಶ್ವರ ಯೆಹೋವನ ನುಡಿ. ಆಗ ಸಕಲ ಜನಾಂಗಗಳವರು ನಿಮ್ಮನ್ನು ಧನ್ಯರೆಂದು ಕೊಂಡಾಡುವರು; ನಿಮ್ಮ ದೇಶವು ಆನಂದವಾಗಿರುವದು; ಇದು ಸೇನಾಧೀಶ್ವರ ಯೆಹೋವನ ನುಡಿ" (ಮಲಾಕಿಯ 3:8-12).

---

**18** ಕೀರ್ತನೆಗಳು 51:5, ರೋಮಾಪುರದವರಿಗೆ 3:10-12, 23 **19** ಮತ್ತಾಯ 26:63-64, 27:54, ಲೂಕ 1:30-33, ಯೋಹಾನ 9:35-37, ರೋಮಾಪುರದವರಿಗೆ 1:3-4 **20** ಅಪೋಸ್ತಲರ ಕೃತ್ಯಗಳು 4:12, 20:28, ರೋಮಾಪುರದವರಿಗೆ 3:25, 1 ಯೋಹಾನ 1:7, Rev. 5:9 **21** Psa. 16:9-10, ಮತ್ತಾಯ 28:5-7, Mark 16:9, 12, 14, ಯೋಹಾನ 2:19, 21, 10:17-18, 11:25, ಅಪೋಸ್ತಲರ ಕೃತ್ಯಗಳು 2:24, 3:15, ರೋಮಾಪುರದವರಿಗೆ 8:11, 1 ಕೊರಿಂಥದವರಿಗೆ 15:3-7 **22** ಲೂಕ 22:69, ಅಪೋಸ್ತಲರ ಕೃತ್ಯಗಳು 2:25-36, ಇಬ್ರಿಯರಿಗೆ 10:12-13 **23** 1 ಕೊರಿಂಥದವರಿಗೆ 3:16, ಪ್ರಕಟನೆ 3:20 **24** ಎಫೆಸದವರಿಗೆ 2:13-22, ಇಬ್ರಿಯರಿಗೆ 9:22, 13:12, 20-21, 1 ಯೋಹಾನ 1:7, ಪ್ರಕಟನೆ 1:5, 7:14 **25** ಮತ್ತಾಯ 26:28, ಅಪೋಸ್ತಲರ ಕೃತ್ಯಗಳು 2:21, 4:12, ಎಫೆಸದವರಿಗೆ1:7, Col. 1:14 **26** ಮತ್ತಾಯ 21:22, ಯೋಹಾನ 6:35, 37-40, ರೋಮಾಪುರದವರಿಗೆ 10:13 **27** ಇಬ್ರಿಯರಿಗೆ 11:6 **28** ಯೋಹಾನ 5:14, 8:11, ರೋಮಾಪುರದವರಿಗೆ 6:4, 1 ಕೊರಿಂಥದವರಿಗೆ 15:10, ಪ್ರಕಟನೆ 7:14, 22:14 **29** ಮತ್ತಾಯ 28:18-20, ಯೋಹಾನ 3:5, ಅಪೋಸ್ತಲರ ಕೃತ್ಯಗಳು 2:38, 19:3-5 **30** ಧರ್ಮೋಪದೇಶಕಾಂಡ 4:29, 13:4, 26:16, ಯೆಹೋಶುವನು 1:8, 22:5, 2 ತಿಮೊಥೆಯನಿಗೆ 2:15, 3:14-17, ಯಾಕೋಬನು 1:22-25, ಪ್ರಕಟನೆ 3:18

ಹೆಚ್ಚಿನ ಮಾಹಿತಿಗಾಗಿ ಅಥವಾ ಆಸಕ್ತಿಕರವಾಗಿರಬಹುದಾದ ಇತರ ವಿಷಯಗಳ ಬಗ್ಗೆ ಸಾಹಿತ್ಯಕ್ಕಾಗಿ ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

**Tony Alamo, World Pastor, Tony Alamo Christian Ministries Worldwide • P.O. Box 2948, Hollywood, CA 90078**
**24 ಗಂಟೆಗಳ ಪ್ರಾರ್ಥನೆಯ ಸಹಾಯವಾಣಿ: (661) 252-5686 • Fax (661) 252-4362**
**www.alamoministries.com • info@alamoministries.com**

ತಮ್ಮ ಸಂಪೂರ್ಣ ಹೃದಯ, ಆತ್ಮ, ಮನಸ್ಸು, ಮತ್ತು ಬಲದಿಂದ ಪ್ರಭುವಿನ ಸೇವೆ ಮಾಡಲು ನಿಜವಾಗಿಯೂ ಬಯಸುವ ನಮ್ಮ ಎಲ್ಲಾ ಯು.ಎಸ್. ತಾಣಗಳಲ್ಲಿರುವವರಿಗೆ ಬದುಕಿಗೆ ಅಗತ್ಯವಾದ ಎಲ್ಲಾ ಸೌಕರ್ಯಗಳೊಂದಿಗೆ ವಾಸಿಸಲು ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರೀಸ್ ವರ್ಲ್ಡ್‌ವೈಡ್ ಸ್ಥಳ ಒದಗಿಸುತ್ತದೆ.

ಆರಾಧನೆಗಳನ್ನು ನ್ಯೂ ಯಾರ್ಕ್ ನಗರದಲ್ಲಿ ಪ್ರತಿ ಮಂಗಳವಾರ ರಾತ್ರಿ 8 ಗಂಟೆಗೆ ಮತ್ತು ಇತರ ತಾಣಗಳಲ್ಲಿ ಪ್ರತಿ ರಾತ್ರಿ ನಡೆಸಲಾಗುತ್ತದೆ.

ಮಾಹಿತಿಗಾಗಿ ದಯವಿಟ್ಟು (908) 937-5723 ಗೆ ಕರೆ ಮಾಡಿ. ಪ್ರತಿ ಆರಾಧನೆಯ ನಂತರ ಊಟೋಪಚಾರವಿರುತ್ತದೆ.

333ಕ್ಕೂ ಹೆಚ್ಚಿನ ಭವಿಷ್ಯವಾಣಿಗಳಲ್ಲಿ ಹಳೆ ಒಡಂಬಡಿಕೆಯಿಂದ ಕ್ರಿಸ್ತರನ್ನು ತೋರಿಸುವ ಪ್ಯಾಸ್ಟರ್ ಅಲಾಮೊ ಅವರ, ದ ಮೆಸ್ಸಾಯ, ಪುಸ್ತಕವನ್ನು ಕೇಳಿ ಪಡೆಯಿರಿ.

*ಪ್ಯಾಸ್ಟರ್ ಅಲಾಮೊ ಅವರ ಸಾಹಿತ್ಯದ ವಿತರಕರಾಗುವ ಮೂಲಕ ಆತ್ಮಗಳ ಕೊಯ್ಲಿನಲ್ಲಿ ಶ್ರಮಜೀವಿಯಾಗಿರಿ.*

*ನಮ್ಮ ಎಲ್ಲಾ ಸಾಹಿತ್ಯ ಮತ್ತು ಆಡಿಯೊ ಸಂದೇಶಗಳು, ಷಿಪಿಂಗ್ ಸೇರಿದಂತೆ ಶುಲ್ಕರಹಿತವಾಗಿವೆ. ಅವುಗಳಿಗಾಗಿ ನಿಮ್ಮಿಂದ ಯಾರಾದರೂ ಶುಲ್ಕ ಪಡೆಯಲು ಪ್ರಯತ್ನಿಸುತ್ತಿದ್ದರೆ, ದಯವಿಟ್ಟು (661) 252-5686 ಗೆ ಕಲೆಕ್ಟ್ ಕರೆ ಮಾಡಿ.*

ಈ ಸಾಹಿತ್ಯವು ರಕ್ಷಣೆಯ ನಿಜವಾದ ಯೋಜನೆಯನ್ನು ಹೊಂದಿದೆ (ಅಪೋಸ್ತಲರ ಕೃತ್ಯಗಳು 4:12).

ಇದನ್ನು ಬಿಸಾಡಬೇಡಿ, ಬೇರೆ ಯಾರಿಗಾದರೂ ಕೊಡಿ.

ಇತರ ದೇಶಗಳಲ್ಲಿರುವವರೇ, ಈ ಸಾಹಿತ್ಯವನ್ನು ನಿಮ್ಮ ಸ್ಥಳೀಯ ಭಾಷೆಗೆ ಭಾಷಾಂತರಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.

ನೀವು ಮರುಮುದ್ರಣ ಮಾಡುವುದೇ ಆದಲ್ಲಿ, ದಯವಿಟ್ಟು ಈ ಕೃತಿಸ್ವಾಮ್ಯ ಮತ್ತು ನೋಂದಣಿಯನ್ನು ಸೇರಿಸಿ:

© Copyright November 2014 All rights reserved World Pastor Tony Alamo ®Registered November 2014

KANNADA—Vol. 20500—*The Only Way Out*